# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸ್‌ವೈಎನ್/ಎಸ್1/168/2023-24

ಜ್ಞಾನ ಭಾರತಿ,
ಬೆಂಗಳೂರು-560 056
ದಿನಾಂಕ: 17.06.2023

ಸಿಂಡಿಕೇಟ್ ಸದಸ್ಯರು,
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು-560 056.

ಮಾನ್ಯರೇ,

ವಿಷಯ: ದಿನಾಂಕ 12.06.2023 ರಂದು ಜರುಗಿದ 168ನೇ ಸಿಂಡಿಕೇಟ್ ಸಭೆಯ ನಡಾವಳಿಗಳು

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ 17.06.2023

******

ದಿನಾಂಕ 12.06.2023 ರಂದು ಬೆಳಗ್ಗೆ 11.00 ಗಂಟೆಗೆ ಜರುಗಿದ 168ನೇ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ ಬೆಂಗಳೂರು ವಿಶ್ವವಿದ್ಯಾಲಯ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಸದರಿ ಪರಿನಿಯಮಾವಳಿಯನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಡನೆ,

ತಮ್ಮ ವಿಶ್ವಾಸಿ,
(signature) 17/6/23
ಕುಲಸಚಿವರು

**ಬೆಂಗಳೂರು ವಿಶ್ವವಿದ್ಯಾಲಯ**

ಸಂಖ್ಯೆ: ಎಸ್‌ವೈಎನ್/ಎಸ್1/168/ಸಾ.ಸ./2023-24

ಜ್ಞಾನಭಾರತಿ
ಬೆಂಗಳೂರು-560 056
ದಿನಾಂಕ: 16.06.2023

**ದಿನಾಂಕ 12-06-2023 ರಂದು ಬೆಳಗ್ಗೆ 11.00 ಗಂಟೆಗೆ ಬೋರ್ಡ್ ರೂಮ್, ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು ಆವರಣ, ಬೆಂಗಳೂರು-560 001, ಇಲ್ಲಿ ಜರುಗಿದ 168ನೇ ಸಿಂಡಿಕೇಟ್ ಸಭೆಯ ನಡಾವಳಿಗಳು.**

**ಹಾಜರಾದ ಸದಸ್ಯರು:**

| | | | |
|---|---|---|---|
| 1. | ಪ್ರೊ. ಡಾ. ಜಯಕರ ಎಸ್ ಎಂ<br>ಕುಲಪತಿಗಳು | - | ಸಭಾಧ್ಯಕ್ಷರು |
| 2. | ಪ್ರೊ. ವಿ.ವಿ. ಸುರೇಶ್ ಬಾಬು | - | ಸದಸ್ಯರು |
| 3. | ಶ್ರೀ ಎಂ. ಉದಯಕುಮಾರ್ | - | ಸದಸ್ಯರು |
| 4. | ಡಾ. ಮಾಲಿನಿ ಕೆ | - | ಸದಸ್ಯರು |
| 5. | ಶ್ರೀ ಹರೀಶ್ ನಾಯ್ಕ್ | - | ಸದಸ್ಯರು |
| 6. | ಡಾ. ಕೆ.ಎ. ಮಹೇಶ್ವರಯ್ಯ | - | ಸದಸ್ಯರು |
| 7. | ಶ್ರೀಮತಿ ಕ್ಷಮಾ ಕುಲಕರ್ಣಿ | - | ಸದಸ್ಯರು |
| 8. | ಶ್ರೀಮತಿ ಸಿ ತೇಜಸ್ವಿನಿ | - | ಸದಸ್ಯರು |
| 9. | ಪ್ರೊ. ಸಿ. ಶ್ರೀನಿವಾಸ್,<br>ಕುಲಸಚಿವರು (ಮೌಲ್ಯಮಾಪನ) | - | ಸದಸ್ಯರು |
| 10. | ಪ್ರೊ. ಸಿ. ಶ್ರೀನಿವಾಸ್,<br>ಕುಲಸಚಿವರು (ಮೌಲ್ಯಮಾಪನ) ಪ್ರಭಾರ | - | ಸದಸ್ಯ ಕಾರ್ಯದರ್ಶಿ |

ಎರಡು ನಿಮಿಷ ಪ್ರಾರ್ಥನೆಯ ನಂತರ ಸಭೆ ಪ್ರಾರಂಭವಾಯಿತು.

ಕುಲಸಚಿವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಹಾಗೂ ಹೊಸದಾಗಿ ಸಿಂಡಿಕೇಟ್ ಸದಸ್ಯರಾಗಿ ನಾಮನಿರ್ದೇಶನ ಹೊಂದಿರುವ ಡಾ. ಮಾಲಿನಿ ಕೆ, ಅವರನ್ನು ಸಭೆಗೆ ಪರಿಚಯಿಸಿ, ಸ್ವಾಗತವನ್ನು ಕೋರಿ ಸಭೆಯನ್ನು ನಡೆಸಿಕೊಡಬೇಕೆಂದು ಕುಲಪತಿಗಳಲ್ಲಿ ಕೋರಿದರು.

ಕುಲಸಚಿವರಾಗಿ ಕಾರ್ಯ ನಿರ್ವಹಿಸಿ ವರ್ಗಾವಣೆಯಾದ ಶ್ರೀ ಎನ್. ಮಹೇಶ್ ಬಾಬು, ಕೆ.ಎ.ಎಸ್. ಅವರು ಹಾಗೂ ನಿರ್ಗಮಿತ ಸಿಂಡಿಕೇಟ್ ಸದಸ್ಯರಾದ ಡಾ. ಸುಧಾಕರ ಹೆಚ್ ಅವರುಗಳ ಸೇವೆಯನ್ನು ದಾಖಲಿಸಿ, ಅವರುಗಳು ಸಲ್ಲಿಸಿದ ಸೇವೆಯನ್ನು ಸಿಂಡಿಕೇಟ್ ಸ್ಮರಿಸಿತು.

ಕುಲಪತಿಗಳು ಸದಸ್ಯರೆಲ್ಲರಿಗೂ ಮತ್ತೊಮ್ಮೆ ಸ್ವಾಗತ ಕೋರಿ ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಂಡರು. ಅವರು ಮುಂದುವರೆದು, ಮಾತನಾಡಿ ಕಳೆದ ಸಿಂಡಿಕೇಟ್ ಸಭೆಯು ದಿನಾಂಕ; 21.03.2023ರಂದು ಜರುಗಿದ್ದು, ವಿಧಾನಸಭಾ ಚುನಾವಣೆ ಪ್ರಯುಕ್ತ ನೀತಿ ಸಂಹಿತೆ ಜಾರಿಯಲ್ಲಿದ ಕಾರಣ ಸಿಂಡಿಕೇಟ್ ಹಾಗೂ ಇತರ ಶಾಸನಬದ್ಧ ಸಭೆಗಳನ್ನು ಕರೆಯಲಾಗಿರಲಿಲ್ಲ. ಈ ಕಾಲಾವಧಿಯಲ್ಲಿ ವಿಶ್ವವಿದ್ಯಾಲಯದ 4ನೇ ಆವೃತ್ತಿಗೆ ರಾಷ್ಟ್ರೀಯ ಮೌಲ್ಯೀಕರಣ ಹಾಗೂ ಮಾನ್ಯತಾ ಪರಿಷತ್ತಿನಿಂದ ಮರು-ಮೌಲ್ಯಮಾಪನ ಕಾರ್ಯ ನಡೆದಿದ್ದು, ದಿನಾಂಕ: 10.06.2023ರಂದು ಫಲಿತಾಂಶವನ್ನು ಘೋಷಿಸಲಾಗಿದೆ. ಬೆಂಗಳೂರು ವಿಶ್ವವಿದ್ಯಾಲಯಕ್ಕೆ ದಾಖಲೆ ***CGPA 3.75*** ಬಂದಿದ್ದು, ***'A++'*** ಗ್ರೇಡ್ ಬಂದಿದೆಯೆಂದು ತಮ್ಮ ಸಂತೋಷವನ್ನು ಹಂಚಿಕೊಂಡು, ಇದೊಂದು ಐತಿಹಾಸಿಕ ಹೆಜ್ಜೆಯಾಗಿದ್ದು, ಈ ಮರು-ಮೌಲ್ಯಮಾಪನಾ ಕಾರ್ಯಕ್ಕೆ ಶ್ರಮಿಸಿದ ಎಲ್ಲಾ ಅಧಿಕಾರಿಗಳು, ನಿವೃತ್ತ ಕುಲಪತಿಗಳು, ಪ್ರಾಧಿಕಾರಗಳ ಸದಸ್ಯರುಗಳು, ಶಿಕ್ಷಕರು, ಶಿಕ್ಷಕೇತರ ಸಿಬ್ಬಂದಿ, ವಿದ್ಯಾರ್ಥಿಗಳು, ಹಳೇಯ ವಿದ್ಯಾರ್ಥಿಗಳು, ಹಾಗೂ ಪೋಷಕರುಗಳಿಗೆ ತಮ್ಮ ಧನ್ಯವಾದಗಳನ್ನು ಅರ್ಪಿಸಿದರು.

ಈ ಸಾಧನೆಯಿಂದ ವಿಶ್ವವಿದ್ಯಾಲಯದ ಜವಾಬ್ದಾರಿ ಹೆಚ್ಚಿದೆ ಎಂದು ತಿಳಿಸಿ ಸಿಂಡಿಕೇಟ್ ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಂಡರು.

***Proceedings of the 168th meeting of the Syndicate held on 12.06.2023***

**ವಿಷಯ ಸಂಖ್ಯೆ 01**: ದಿನಾಂಕ 24.01.2023 ರಂದು ಜರುಗಿದ 167 ನೇ ಸಿಂಡಿಕೇಟ್ ಸಭೆ ಹಾಗೂ ದಿನಾಂಕ 21.03.2023 ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆಗಳ ನಡಾವಳಿಗಳನ್ನು ಸ್ಥಿರೀಕರಿಸುವ ಬಗ್ಗೆ.

ಶ್ರೀ ಉದಯ ಕುಮಾರ್ ಎಂ ಅವರು ಮಾತನಾಡಿ, ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರ ನೀಡುವ ಬಗ್ಗೆ ತೆಗೆದುಕೊಂಡಿರುವ ಸಿಂಡಿಕೇಟ್ ನಿರ್ಣಯದ ಅನುಷ್ಠಾನದ ಬಗ್ಗೆ ಮಾಹಿತಿ ಕೋರಿದರು.

ಕುಲಪತಿಗಳು ಮಾತನಾಡಿ, ಸನ್ಮಾನ್ಯ ಉನ್ನತ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ, ಎಲ್ಲಾ ವಿಶ್ವವಿದ್ಯಾಲಯಗಳು, ವಿದ್ಯಾರ್ಥಿಗಳಿಗೆ ಮುದ್ರಿತ ಅಂಕಪಟ್ಟಿ ಹಾಗೂ ಪದವಿ ಪ್ರಮಾಣ ಪತ್ರ ನೀಡುವ ಬಗ್ಗೆ, ಸರ್ಕಾರದ ನಿರ್ದೇಶನದ ಬಗ್ಗೆ ಚರ್ಚಿಸಿದಾಗ, ಸರ್ಕಾರದಿಂದ ಸದ್ಯದಲ್ಲೇ ಈ ಎರಡೂ ಪ್ರಮಾಣ ಪತ್ರಗಳ ಮುದ್ರಣ ಪ್ರತಿ ನೀಡುವ ಬಗ್ಗೆ ಮಾರ್ಗಸೂಚಿಯನ್ನು ಹೊರಡಿಸುವುದಾಗಿ ತಿಳಿಸಲಾಗಿದೆ, ಅಲ್ಲಿಯವರೆವಿಗೂ ಕಾಯುವುದಾಗಿ ಅವರು ತಿಳಿಸಿದರು. ಅವರು ಮುಂದುವರೆದು, ಸರ್ಕಾರದ ಮಾರ್ಗಸೂಚಿ ಬರುವವರೆಗೂ ಕಾಯವುದಾಗಿ ಹೇಳಿದರು.

**ನಿರ್ಣಯ:**

ಮೇಲ್ಕಂಡ ಚರ್ಚೆಯೊಂದಿಗೆ, ದಿನಾಂಕ 24.01.2023 ರಂದು ಜರುಗಿದ 167 ನೇ ಸಿಂಡಿಕೇಟ್ ಸಭೆ ಹಾಗೂ ದಿನಾಂಕ 21.03.2023 ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆಗಳ ನಡಾವಳಿಗಳನ್ನು ಸ್ಥಿರೀಕರಿಸಿತು.

*Proceedings of the 168th meeting of the Syndicate held on 12.06.2023*

**ವಿಷಯ ಸಂಖ್ಯೆ 02**: ದಿನಾಂಕ 24.01.2023 ರಂದು ಜರುಗಿದ 167 ನೇ ಸಿಂಡಿಕೇಟ್ ಸಭೆ ಹಾಗೂ ದಿನಾಂಕ 21.03.2023 ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆಗಳ ನಡಾವಳಿಗಳಿಗೆ ತೆಗೆದುಕೊಂಡ ಕ್ರಮದ ಬಗೆಗಿನ ಅನುಸರಣಾ ವರದಿಗಳು (ATR)

ಡಾ. ಕೆ.ಎ. ಮಹೇಶ್ವರಯ್ಯ ಅವರು ಮಾತನಾಡಿ, ಪ್ರಸಾರಾಂಗ ಸಲಹಾ ಸಮಿತಿಯ ಶಿಫಾರಸ್ಸಿನ ಮೇರೆಗೆ, ಮೆ. ಸ್ವಪ್ನ ಬುಕ್ ಹೌಸ್ ಅವರಿಗೆ ನೋಟೀಸ್ ಜಾರಿ ಮಾಡಲು ಹಾಗೂ ರೂ.5.00 ಲಕ್ಷಗಳ ದಂಡ ಶುಲ್ಕವನ್ನು ವಸೂಲಿ ಮಾಡಲು ಸಿಂಡಿಕೇಟ್ ನಿರ್ಣಯಿಸಿತ್ತು. ಈ ಬಗ್ಗೆ ತೆಗೆದುಕೊಂಡ ಕ್ರಮದ ಬಗ್ಗೆ ಮಾಹಿತಿ ಕೋರಿದರು.

ಆಹ್ವಾನಿತರಾಗಿ ಸಭೆಯಲ್ಲಿ ಹಾಜರಿದ್ದ ವಿತ್ತಾಧಿಕಾರಿಯವರು ಮಾತನಾಡಿ, ಈಗಾಗಲೇ ಮೆ. ಸ್ವಪ್ನ ಬುಕ್ ಹೌಸ್ ಅವರು ರೂ.5.00 ಲಕ್ಷಗಳ ದಂಡ ಶುಲ್ಕವನ್ನು ಪಾವತಿ ಮಾಡಿರುತ್ತಾರೆ ಎಂದು ತಿಳಿಸಿದರು.

**ನಿರ್ಣಯ:**

ಮೇಲ್ಕಂಡ ಚರ್ಚೆಯೊಂದಿಗೆ, ದಿನಾಂಕ 24.01.2023 ರಂದು ಜರುಗಿದ 167 ನೇ ಸಿಂಡಿಕೇಟ್ ಸಭೆ ಹಾಗೂ ದಿನಾಂಕ 21.03.2023 ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆಗಳ ನಡಾವಳಿಗಳಿಗೆ ತೆಗೆದುಕೊಂಡ ಕ್ರಮದ ಬಗೆಗಿನ ಅನುಸರಣಾ ವರದಿಗಳನ್ನು (ATR) ಸಿಂಡಿಕೇಟ್ ಪರಿಗಣಿಸಿ ಅನುಮೋದಿಸಿತು.

*Proceedings of the 168th meeting of the Syndicate held on 12.06.2023*

**Item No3.** To consider to panel of experts to the Selection Committees for Selection/Promotion of the University teachers/Librarian and Director Physical Education.

***Resolution:***

The Syndicate perused the panel of experts recommended by the Vice-Chancellor in different subjects for nomination of 3 experts in the Selection Committees for selection / promotion of teachers for the post of Assistant Professor, Associate Professor, Professor and Senior Professor in the University and resolved to approve the panels. The Syndicate authorize the Vice-Chancellor to invite the experts from the panel and also to change the names / update the panels as and when the persons in the panel get superannuated.

17/6/23

**Proceedings of the 168th meeting of the Syndicate held on 12.06.2023**

**ವಿಷಯ ಸಂಖ್ಯೆ 04:** ಅಕಾರ್ಯ ವಿಚಾರಣಾ ಸಮಿತಿಯ ದಿನಾಂಕ 19.01.2023 ರಂದು ನಡೆದ ಸಭೆಯ ನಡಾವಳಿ ಹಾಗೂ ಶಿಫಾರಸ್ಸು ಪರಿಗಣಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ವಾಣಿಜ್ಯ ನಿಕಾಯಕ್ಕೆ ಸಂಬಂಧಿಸಿದಂತೆ, ದಿನಾಂಕ: 19.01.2023 ರಂದು ನಡೆದ ಅಕಾರ್ಯ ವಿಚಾರಣಾ ಸಮಿತಿ ಸಭೆಯ ನಡಾವಳಿ ಹಾಗೂ ಶಿಫಾರಸ್ಸುಗಳನ್ನು ಸಿಂಡಿಕೇಟ್ ಸಭೆಯು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 77(2)ರ ಅಡಿಯಲ್ಲಿ ಪರಿಗಣಿಸಿ ಅನುಮೋದಿಸಿತು.

**Proceedings of the 168th meeting of the Syndicate held on 12.06.2023**

**ವಿಷಯ ಸಂಖ್ಯೆ 05:** ಅಕಾರ್ಯ ವಿಚಾರಣಾ ಸಮಿತಿಯ ದಿನಾಂಕ 03.06.2022 ರಂದು ನಡೆದ ಸಭೆಯ ನಡಾವಳಿ ಹಾಗೂ ಶಿಫಾರಸ್ಸು ಪರಿಗಣಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ವಿಜ್ಞಾನ ನಿಕಾಯಕ್ಕೆ ಸಂಬಂಧಿಸಿದಂತೆ, ದಿನಾಂಕ: 03.06.2022 ರಂದು ನಡೆದ ಅಕಾರ್ಯ ವಿಚಾರಣಾ ಸಮಿತಿ ಸಭೆಯ ನಡಾವಳಿ ಹಾಗೂ ಶಿಫಾರಸ್ಸುಗಳನ್ನು ಸಿಂಡಿಕೇಟ್ ಸಭೆಯು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 77(2)ರ ಅಡಿಯಲ್ಲಿ ಪರಿಗಣಿಸಿ ಅನುಮೋದಿಸಿತು.

**Proceedings of the 168th meeting of the Syndicate held on 12.06.2023**

**ವಿಷಯ ಸಂಖ್ಯೆ 06:** ಅಕಾರ್ಯ ವಿಚಾರಣಾ ಸಮಿತಿಯ ದಿನಾಂಕ 19.01.2023 ರಂದು ನಡೆದ ಸಭೆಯ ನಡಾವಳಿ ಹಾಗೂ ಶಿಫಾರಸ್ಸುಗಳನ್ನು ಪರಿಗಣಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ವಾಣಿಜ್ಯ ನಿಕಾಯಕ್ಕೆ ಸಂಬಂಧಿಸಿದಂತೆ, ದಿನಾಂಕ: 19.01.2023 ರಂದು ನಡೆದ ಅಕಾರ್ಯ ವಿಚಾರಣಾ ಸಮಿತಿ ಸಭೆಯ ನಡಾವಳಿ ಹಾಗೂ ಶಿಫಾರಸ್ಸುಗಳನ್ನು ಸಿಂಡಿಕೇಟ್ ಸಭೆಯು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 77(2)ರ ಅಡಿಯಲ್ಲಿ ಪರಿಗಣಿಸಿ ಅನುಮೋದಿಸಿತು.

**Proceedings of the 168th meeting of the Syndicate held on 12.06.2023**

**ವಿಷಯ ಸಂಖ್ಯೆ 07**: ಅಕಾರ್ಯ ವಿಚಾರಣಾ ಸಮಿತಿಯ ದಿನಾಂಕ 19.01.2023 ರಂದು ನಡೆದ ಸಭೆಯ ನಡಾವಳಿ ಹಾಗೂ ಶಿಫ಼ಾರಸ್ಸುಗಳನ್ನು ಪರಿಗಣಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ವಾಣಿಜ್ಯ ನಿಕಾಯಕ್ಕೆ ಸಂಬಂಧಿಸಿದಂತೆ, ದಿನಾಂಕ: 19.01.2023 ರಂದು ನಡೆದ ಅಕಾರ್ಯ ವಿಚಾರಣಾ ಸಮಿತಿ ಸಭೆಯ ನಡಾವಳಿ ಹಾಗೂ ಶಿಫ಼ಾರಸ್ಸುಗಳನ್ನು ಸಿಂಡಿಕೇಟ್ ಸಭೆಯು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 77(2)ರ ಅಡಿಯಲ್ಲಿ ಪರಿಗಣಿಸಿ ಅನುಮೋದಿಸಿತು.

**Proceedings of the 168th meeting of the Syndicate held on 12.06.2023**

**ವಿಷಯ ಸಂಖ್ಯೆ 08**: ಅಕಾರ್ಯ ವಿಚಾರಣಾ ಸಮಿತಿಯ ದಿನಾಂಕ 19.08.2022 ರಂದು ನಡೆದ ಸಭೆಯ ನಡಾವಳಿ ಹಾಗೂ ಶಿಫ಼ಾರಸ್ಸುಗಳನ್ನು ಪರಿಗಣಿಸುವ ಬಗ್ಗೆ

**ನಿರ್ಣಯ:**

ಚರ್ಚೆಯ ನಂತರ, ಕಲಾ ನಿಕಾಯಕ್ಕೆ ಸಂಬಂಧಿಸಿದಂತೆ, ದಿನಾಂಕ: 19.08.2022 ರಂದು ನಡೆದ ಅಕಾರ್ಯ ವಿಚಾರಣಾ ಸಮಿತಿ ಸಭೆಯ ನಡಾವಳಿ ಹಾಗೂ ಶಿಫ಼ಾರಸ್ಸುಗಳನ್ನು ಸಿಂಡಿಕೇಟ್ ಸಭೆಯು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 77(2)ರ ಅಡಿಯಲ್ಲಿ ಪರಿಗಣಿಸಿ ಅನುಮೋದಿಸಿತು.

**Proceedings of the 168th meeting of the Syndicate held on 12.06.2023**

**ವಿಷಯ ಸಂಖ್ಯೆ 09**: ಅಕಾರ್ಯ ವಿಚಾರಣಾ ಸಮಿತಿಯ ದಿನಾಂಕ 19.01.2023 ರಂದು ನಡೆದ ಸಭೆಯ ನಡಾವಳಿ ಹಾಗೂ ಶಿಫಾರಸ್ಸುಗಳನ್ನು ಪರಿಗಣಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ವಾಣಿಜ್ಯ ನಿಕಾಯಕ್ಕೆ ಸಂಬಂಧಿಸಿದಂತೆ, ದಿನಾಂಕ: 19.01.2023ರಂದು ನಡೆದ ಅಕಾರ್ಯ ವಿಚಾರಣಾ ಸಮಿತಿ ಸಭೆಯ ನಡಾವಳಿ ಹಾಗೂ ಶಿಫ಼ಾರಸ್ಸುಗಳನ್ನು ಸಿಂಡಿಕೇಟ್ ಸಭೆಯು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 77(2)ರ ಅಡಿಯಲ್ಲಿ ಪರಿಗಣಿಸಿ ಅನುಮೋದಿಸಿತು.

**Proceedings of the 168th meeting of the Syndicate held on 12.06.2023**

**ವಿಷಯ ಸಂಖ್ಯೆ 10:** ಅಕಾರ್ಯ ವಿಚಾರಣಾ ಸಮಿತಿಯ ದಿನಾಂಕ 19.01.2023 ರಂದು ನಡೆದ ಸಭೆಯ ನಡಾವಳಿ ಹಾಗೂ ಶಿಫ಼ಾರಸ್ಸುಗಳನ್ನು ಪರಿಗಣಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ವಾಣಿಜ್ಯ ನಿಕಾಯಕ್ಕೆ ಸಂಬಂಧಿಸಿದಂತೆ, ದಿನಾಂಕ: 19.01.2023ರಂದು ನಡೆದ ಅಕಾರ್ಯ ವಿಚಾರಣಾ ಸಮಿತಿ ಸಭೆಯ ನಡಾವಳಿ ಹಾಗೂ ಶಿಫ಼ಾರಸ್ಸುಗಳನ್ನು ಸಿಂಡಿಕೇಟ್ ಸಭೆಯು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 77(2)ರ ಅಡಿಯಲ್ಲಿ ಪರಿಗಣಿಸಿ ಅನುಮೋದಿಸಿತು.

*Proceedings of the 168th meeting of the Syndicate held on 12.06.2023*

**ವಿಷಯ ಸಂಖ್ಯೆ 11:** ಅಕಾರ್ಯ ವಿಚಾರಣಾ ಸಮಿತಿಯ ದಿನಾಂಕ 03.06.2022 ರಂದು ನಡೆದ ಸಭೆಯ ನಡಾವಳಿ ಹಾಗೂ ಶಿಫಾರಸ್ಸುಗಳನ್ನು ಪರಿಗಣಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ವಿಜ್ಞಾನ ನಿಕಾಯಕ್ಕೆ ಸಂಬಂಧಿಸಿದಂತೆ, ದಿನಾಂಕ: 03.06.2023ರಂದು ನಡೆದ ಅಕಾರ್ಯ ವಿಚಾರಣಾ ಸಮಿತಿ ಸಭೆಯ ನಡಾವಳಿ ಹಾಗೂ ಶಿಫಾರಸ್ಸುಗಳನ್ನು ಸಿಂಡಿಕೇಟ್ ಸಭೆಯು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 77(2)ರ ಅಡಿಯಲ್ಲಿ ಪರಿಗಣಿಸಿ ಅನುಮೋದಿಸಿತು.

*Proceedings of the 168th meeting of the Syndicate held on 12.06.2023*

**ವಿಷಯ ಸಂಖ್ಯೆ 12:** ಅಕಾರ್ಯ ವಿಚಾರಣಾ ಸಮಿತಿಯ ದಿನಾಂಕ 19.01.2023 ರಂದು ನಡೆದ ಸಭೆಯ ನಡಾವಳಿ ಹಾಗೂ ಶಿಫಾರಸ್ಸುಗಳನ್ನು ಪರಿಗಣಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ವಾಣಿಜ್ಯ ನಿಕಾಯಕ್ಕೆ ಸಂಬಂಧಿಸಿದಂತೆ, ದಿನಾಂಕ: 19.01.2023 ರಂದು ನಡೆದ ಅಕಾರ್ಯ ವಿಚಾರಣಾ ಸಮಿತಿ ಸಭೆಯ ನಡಾವಳಿ ಹಾಗೂ ಶಿಫಾರಸ್ಸುಗಳನ್ನು ಸಿಂಡಿಕೇಟ್ ಸಭೆಯು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 77(2)ರ ಅಡಿಯಲ್ಲಿ ಪರಿಗಣಿಸಿ ಅನುಮೋದಿಸಿತು.

*Proceedings of the 168th meeting of the Syndicate held on 12.06.2023*

**ವಿಷಯ ಸಂಖ್ಯೆ 13:** 2022–23ನೇ ಸಾಲಿಗೆ ಶ್ರೀ. ಎಸ್. ಕರಿಯಪ್ಪ, ಕಾಲೇಜ್ ಆಫ್ ಎಜುಕೇಷನ್ ಮತ್ತು ಶ್ರೀ ರಾಘವೇಂದ್ರ ಕಾಲೇಜ್ ಆಫ್ ಎಜುಕೇಷನ್‌ಗಳ ಸಂಯೋಜನಾ ನವೀಕರಣದ ವಿಷಯದಲ್ಲಿ ಸಿಂಡಿಕೇಟ್ ನಿರ್ಣಯದನುಸಾರವಾಗಿ ರಚಿಸಿದ ಸಮಿತಿಯು ದಿಢೀರ್ ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಪರಿಗಣಿಸುವ ಬಗ್ಗೆ.

ಶ್ರೀ ಉದಯ ಕುಮಾರ್ ಎಂ ಅವರು ಮಾತನಾಡಿ, ಪರಾಮರ್ಶಿತ ಟಿಪ್ಪಣಿಯಲ್ಲಿ ಸೂಚಿಸಿರುವ ಕಾಲೇಜುಗಳಿಗೆ ದಿಢೀರಿ ಭೇಟಿ ನೀಡಿ ಪರಿಶೀಲಿಸಲು ಸಿಂಡಿಕೇಟ್ ಉಪಸಮಿತಿಯನ್ನು ರಚಿಸಿದ್ದು, ಈ ಸಮಿತಿಗೆ ಸಿಂಡಿಕೇಟ್ ಸದಸ್ಯರೊಬ್ಬರನ್ನು, ನಾಮನಿರ್ದೇಶನ ಮಾಡಿದ್ದರೆ ವಾಸ್ತವ ಸ್ಥಿತಿ ಅರಿಯಲು ಅನುಕೂಲವಾಗುತ್ತಿದೆಂದು ತಿಳಿಸಿದರು. ಕುಲಪತಿಗಳು ಮಾತನಾಡಿ ಮುಂದೆ ಸಿಂಡಿಕೇಟ್ ಸಭೆಯಲ್ಲೇ ಸಮಿತಿಯನ್ನು ಅಂತಿಮಗೊಳಿಸಲಾಗುವುದೆಂದು ತಿಳಿಸಿದರು.

ನಿರ್ಣಯ:

2022–23ನೇ ಸಾಲಿಗೆ ಶ್ರೀ. ಎಸ್. ಕರಿಯಪ್ಪ, ಕಾಲೇಜ್ ಆಫ್ ಎಜುಕೇಷನ್ ಮತ್ತು ಶ್ರೀ ರಾಘವೇಂದ್ರ ಕಾಲೇಜ್ ಆಫ್ ಎಜುಕೇಷನ್‌ಗಳ ಸಂಯೋಜನಾ ನವೀಕರಣದ ವಿಷಯದಲ್ಲಿ ಸಿಂಡಿಕೇಟ್ ನಿರ್ಣಯದನುಸಾರವಾಗಿ ರಚಿಸಿದ ಸಮಿತಿಯು ದಿಢೀರ್ ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಪರಿಗಣಿಸಿತು ಹಾಗೂ ಸಂಯೋಜನಾ ನವೀಕರಣವನ್ನು ಮಂಜೂರು ಮಾಡಲು ಸಿಂಡಿಕೇಟ್ ಅನುಮೋದಿಸಿತು.

***Proceedings of the 168th meeting of the Syndicate held on 12.06.2023***

**ವಿಷಯ ಸಂಖ್ಯೆ 14:** 2021–22ನೇ ಸಾಲಿಗೆ ಸಂಯೋಜನಾ ನವೀಕರಣಕ್ಕೆ ಅರ್ಜಿ ಸಲ್ಲಿಸಿದಂತಹ ಕಾಲೇಜುಗಳ ಸಂಯೋಜನೆ ನವೀಕರಣಕ್ಕೆ ಅರ್ಜಿ ಸಲ್ಲಿಸುವ ಬಗ್ಗೆ ಅರ್ಹತೆಯನ್ನು ಪರಿಶೀಲಿಸುವ ಸಲುವಾಗಿ ಪ್ರೊ. ವೈ. ನಾಗರಾಜು, ಮ್ಯಾನೇಜ್‌ಮೆಂಟ್ ವಿಭಾಗ, ಇವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯ ವರದಿಗಳನ್ನು ಪರಿಗಣಿಸುವ ಬಗ್ಗೆ.

ನಿರ್ಣಯ:

2021–22ನೇ ಸಾಲಿಗೆ ಸಂಯೋಜನಾ ನವೀಕರಣಕ್ಕೆ ಅರ್ಜಿ ಸಲ್ಲಿಸಿದಂತಹ ಕಾಲೇಜುಗಳ ಸಂಯೋಜನೆ ನವೀಕರಣಕ್ಕೆ ಅರ್ಜಿ ಸಲ್ಲಿಸುವ ಬಗ್ಗೆ ಅರ್ಹತೆಯನ್ನು ಪರಿಶೀಲಿಸುವ ಸಲುವಾಗಿ ಪ್ರೊ. ವೈ. ನಾಗರಾಜು, ಮ್ಯಾನೇಜ್‌ಮೆಂಟ್ ವಿಭಾಗ, ಇವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯ ವರದಿಗಳನ್ನು ಪರಿಗಣಿಸಿ ಅನುಮೋದಿಸಿತು.

***Proceedings of the 168th meeting of the Syndicate held on 12.06.2023***

**ವಿಷಯ ಸಂಖ್ಯೆ 15:** ಶ್ರೀ ಹನುಮಂತ, ಅನುಚರರು, ಹಣಕಾಸು ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಇವರ ಪತ್ನಿಯವರ ವೈದ್ಯಕೀಯ ವೆಚ್ಚದ ಮರು ಪಾವತಿಸುವ ಬಗ್ಗೆ.

ನಿರ್ಣಯ:

ಮಾನ್ಯತೆ ಇಲ್ಲದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವ ವೆಚ್ಚವನ್ನು ಮರುಬರಣೆ ಮಾಡಲು ನಿಯಮಗಳಲ್ಲಿ ಅವಕಾಶವಿಲ್ಲದ ಕಾರಣ, ಶ್ರೀ ಹನುಮಂತ, ಅನುಚರರು, ಹಣಕಾಸು ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಇವರ ಪತ್ನಿಯವರ ವೈದ್ಯಕೀಯ ವೆಚ್ಚದ ಮರುಪಾವತಿ ಕುರಿತು ಮನವಿಯನ್ನು ಸಿಂಡಿಕೇಟ್ ತಿರಸ್ಕರಿಸಿತು.

13/6/23

*Proceedings of the 168th meeting of the Syndicate held on 12.06.2023*

**ವಿಷಯ ಸಂಖ್ಯೆ 16:** ದಿನಾಂಕ 10.10.2022 ರಂದು ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ ಕು.ಆರ್. ಶಿಲ್ಪಶ್ರೀ, ಗಣಿತಶಾಸ್ತ್ರ ವಿಭಾಗದ ವಿದ್ಯಾರ್ಥಿನಿಯ ಮೇಲೆ ಬಿ.ಎಂ.ಟಿ.ಸಿ ಬಸ್ ಹರಿದ ಕಾರಣ ಚಿಕಿತ್ಸೆ ಫಲಕಾರಿಯಾಗದೆ ಮೃತ ಪಟ್ಟಿದ್ದು ಇವರ ಕುಟುಂಬಕ್ಕೆ ಜೀವನ ನಿರ್ವಹಣೆಗೆ ನೆರವಾಗುವ ಬಗ್ಗೆ.

ಕುಲಪತಿಗಳು ಮಾತನಾಡಿ, ಈ ಹಿಂದೆ ನಡೆದ ಘಟನೆ ಹಾಗೂ ಹಿಂದಿನ ಸಿಂಡಿಕೇಟ್ ಸಭೆಗಳಲ್ಲಿ ಆದ ಚರ್ಚೆಯ ವಿವರಗಳನ್ನು ಸಿಂಡಿಕೇಟ್ ಗಮನಕ್ಕೆ ತಂದು, ದಿವಂಗತ ಕು.ಆರ್. ಶಿಲ್ಪಶ್ರೀ, ಗಣಿತಶಾಸ್ತ್ರ ವಿಭಾಗದ ವಿದ್ಯಾರ್ಥಿನಿ, ಇವರ ಪೋಷಕರು ಹಾಗೂ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಪದೇ ಪದೇ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ ಮನವಿಯ ಕುರಿತು ಸಿಂಡಿಕೇಟ್ ನಿರ್ಣಯವನ್ನು ಕೋರಿದರು. ಅವರ ಕುಟುಂಬದವರು ತೀರಾ ಬಡವರ್ಗಕ್ಕೆ ಸೇರಿದವರಾಗಿದ್ದಾರೆಂದು ತಿಳಿಸಿದರು.

ವಿತ್ತಾಧಿಕಾರಿಯವರು ಮಾತನಾಡಿ, 2023–24ನೇ ಆಯ–ವ್ಯಯದಲ್ಲಿ ವಿಶ್ವವಿದ್ಯಾಲಯದ ಆವರಣದಲ್ಲಿ ವಿದ್ಯಾರ್ಥಿಗಳಿಗೆ ಆಗುವ ಅವಘಡಗಳಿಗೆ ವೆಚ್ಚಗಳನ್ನು ಭರಿಸಲು ರೂ.5.00 ಲಕ್ಷಗಳನ್ನು ಮೀಸಲಿರಸಲಾಗಿದೆ ಎಂದು ಸಿಂಡಿಕೇಟ್ ಗಮನಕ್ಕೆ ತಂದರು.

ಶ್ರೀ ಉದಯ ಕುಮಾರ್ ಎಂ ಅವರು ಮಾತನಾಡಿ, ಈ ಮೊದಲು ದಿವಂಗತ ಕು.ಆರ್. ಶಿಲ್ಪಶ್ರೀ, ಅವರ ವೈದ್ಯಕೀಯ ವೆಚ್ಚವಾಗಿ ರೂ.5.00 ಲಕ್ಷಗಳನ್ನು ನೀಡಬೇಕೆಂದು ಸಿಂಡಿಕೇಟ್ ನಿರ್ಣಯಿಸಿತ್ತು. ಆದಕಾರಣ, ಈಗ ಮೀಸಲಿರಿಸಿರುವ ಮೊತ್ತದಲ್ಲಿ ರೂ.4.00 ಲಕ್ಷಗಳನ್ನು ಪರಿಹಾರವಾಗಿ ನೀಡಬಹುದಾಗಿದೆ ಎಂದು ತಿಳಿಸಿದರು.

**ನಿರ್ಣಯ:**

ಚರ್ಚೆಯ ನಂತರ, ದಿನಾಂಕ 10.10.2022 ರಂದು ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ ಕು.ಆರ್. ಶಿಲ್ಪಶ್ರೀ, ಗಣಿತಶಾಸ್ತ್ರ ವಿಭಾಗದ ವಿದ್ಯಾರ್ಥಿನಿಯ ಮೇಲೆ ಬಿ.ಎಂ.ಟಿ.ಸಿ ಬಸ್ ಹರಿದ ಕಾರಣ ಚಿಕಿತ್ಸೆ ಫಲಕಾರಿಯಾಗದೆ ಮೃತ ಪಟ್ಟಿದ್ದು ಇವರ ಕುಟುಂಬಕ್ಕೆ ಜೀವನ ನಿರ್ವಹಣೆಗೆ ನೆರವಾಗಲು ರೂ.4.00 ಲಕ್ಷಗಳ ಪರಿಹಾರವನ್ನು ನೀಡಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು.

*Proceedings of the 168th meeting of the Syndicate held on 12.06.2023*

**ವಿಷಯ ಸಂಖ್ಯೆ 17:** ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಹಲವು ದೂರವಾಣಿಗಳನ್ನು ಸ್ಥಗಿತಗೊಳಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದ 528 ಅನಗತ್ಯ ದೂರವಾಣಿಗಳ ಸೇವೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು.

*Proceedings of the 168th meeting of the Syndicate held on 12.06.2023*

**Item No. 18:** Financial support to file patent from the Dept. of Microbiology and Biotechnology. BUB.

Prof. V.V Suresh Babu, opined that instead of sanctioning amount to the individual cases, a committee may be constituted to frame a draft guideline for reimbursement of expenditure to the teachers, towards obtaining patents. Earlier a Committee under the Chairmanship of Dr. K. Siddappa, Former Vice-Chancellor, Bangalore University has framed a guidelines for undertaking research in the University. He further informed to felicitate teachers with awards in recognition of their research output.

The Vice-Chancellor informed that the teacher award may be given on the teachers' day and the research guidelines framed by the Committee will be placed before the next Syndicate for discussion and for further updation.

***Resolution:***

After detailed discussion, the Syndicate resolved to ratify the action taken by the University in sanctioning Rs.51,000/- to Dr. C. Srinivas vide University Order No. DEV;D2;PATENT-4/Dr.C.S/MBT/2022-23, dated:20.03.2023.

*Proceedings of the 168th meeting of the Syndicate held on 12.06.2023*

**Item No. 19:** Grievance of Sri. V.C Jayaramaiah, Reader in Sericulture (Retd). Bangalore University.

***Resolution:***

The Syndicate perused the agenda note and the opinion of the Legal Advisor in the concerned file. After detailed discussion, it was resolved to direct Sri. V.C Jayaramaiah, Reader in Sericulture (Retd) to submit the pension papers and then the concerned section shall place the matter before the Syndicate for a decision.

13/6/23

*Proceedings of the 168th meeting of the Syndicate held on 12.06.2023*

**ವಿಷಯ ಸಂಖ್ಯೆ 20:** ಶ್ರೀ ಮಲ್ಲಿಕಾರ್ಜುನಯ್ಯ.ಎಂ, ಕಿರಿಯ ಸಹಾಯಕರು, ಇವರ ವಿರುದ್ಧ ದಾಖಲಾದ ಲಂಚ ಪ್ರಕರಣದ ಬಗ್ಗೆ ಮಾನ್ಯ ಉಪ ಲೋಕಾಯುಕ್ತರವರ ಶಿಫಾರಸ್ಸಿನ ಮೇರೆಗೆ ದಂಡನೆ ವಿಧಿಸುವ ಬಗ್ಗೆ.

**ನಿರ್ಣಯ:**

ಮಾನ್ಯ ಉಪ ಲೋಕಾಯುಕ್ತ ಅವರ ಶಿಫಾರಸ್ಸು ಹಾಗೂ ಕಾನೂನು ಅಭಿಪ್ರಾಯದನುಸಾರ ಅಪರಾದಿತ ಶ್ರೀ ಮಲ್ಲಿಕಾರ್ಜುನಯ್ಯ. ಎಂ, ಕಿರಿಯ ಸಹಾಯಕರು, ಇವರ ನಿವೃತ್ತಿಯನ್ನು ಕಡ್ಡಾಯ ನಿವೃತ್ತಿಯೆಂದು ಪರಿಗಣಿಸಲು ಹಾಗೂ ಅವರಿಗೆ ಪಾವತಿ ಮಾಡಬೇಕಾದ ನಿವೃತ್ತಿ ವೇತನದಲ್ಲಿ ಶೇ40ರಷ್ಟನ್ನು ಶಾಶ್ವತವಾಗಿ ಮುರುಗಡೆ ಮಾಡುವ ಶಿಕ್ಷೆಯನ್ನು ವಿಧಿಸಲು ಸಿಂಡಿಕೇಟ್ ಸರ್ವಾನುಮತದಿಂದ ನಿರ್ಣಯಿಸಿತು.

*Proceedings of the 168th meeting of the Syndicate held on 12.06.2023*

**ವಿಷಯ ಸಂಖ್ಯೆ 21:** ಶ್ರೀ ಸಿದ್ಧಲಿಂಗಯ್ಯ, (ನಿವೃತ್ತ ಅನುಚರರು) ಸ್ವಾಗತಕಾರ ಕಛೇರಿ (ಪಿ.ಆರ್.ಓ) ಯಲ್ಲಿ ಕನ್ಸಲ್ಟೆಂಟ್ ಆಗಿ ಕಾರ್ಯ ನಿರ್ವಹಿಸುತ್ತಿರುವ ಇವರು ಆಗಸ್ಟ್-2022 ರಿಂದ ಇವರ ಸೇವೆಯನ್ನು ಮುಂದುವರೆಸಿ ಹಾಗೂ ವೇತನವನ್ನು ಹೆಚ್ಚಿಸುವಂತೆ ಕೋರಿರುವ ಬಗ್ಗೆ.

ಶ್ರೀ ಉದಯಕುಮಾರ್ ಎಂ ಅವರು ಮಾತನಾಡಿ, ನುರಿತ ಹಾಗೂ ಅಗತ್ಯ ವಿದ್ಯಾರ್ಹತೆಯುಳ್ಳ ಅಭ್ಯರ್ಥಿಯನ್ನು ಸಾರ್ವಜನಿಕ ಸಂಪರ್ಕಾಧಿಕಾರಿಯನ್ನಾಗಿ ನೇಮಕ ಮಾಡಬೇಕೆಂದು ಅಭಿಪ್ರಾಯಪಟ್ಟರು. ಅವರು ಮುಂದುವರೆದು, ಪ್ರಸ್ತುತ ನೇಮಕಗೊಂಡಿರುವ ಶ್ರೀ ಸಿದ್ಧಲಿಂಗಯ್ಯ, (ನಿವೃತ್ತ ಅನುಚರರು) ಬೇರೆ ಕಾಲೇಜು ಹಾಗೂ ವಿಶ್ವವಿದ್ಯಾಲಯಗಳಲ್ಲೂ ಸಹ ದಿನ ಪತ್ರಿಕೆಗಳಿಗೆ/ಸುದ್ದಿ ಮಾಧ್ಯಮಗಳಿಗೆ ಮಾಹಿತಿ ಒದಗಿಸುವ ಸಂಪರ್ಕಾಧಿಕಾರಿಯ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ಗಮನಕ್ಕೆ ತಂದರು.

**ನಿರ್ಣಯ:**

ದೀರ್ಘ ಚರ್ಚೆಯ ನಂತರ, ಪರಾಮರ್ಶಿತ ಟಿಪ್ಪಣಿಯಲ್ಲಿನ ಪ್ರಸ್ತಾವನೆಯನ್ನು ಸಿಂಡಿಕೇಟ್ ತಿರಸ್ಕರಿಸಿತು.

*Proceedings of the 168th meeting of the Syndicate held on 12.06.2023*

**ವಿಷಯ ಸಂಖ್ಯೆ 22:** ಕಿಡ್ನಿ (ವೈಪಲ್ಯ) ಕಾಯಿಲೆಯಿಂದ ಬಳಲುತ್ತಿರುವ ಸರ್ಕಾರಿ ನೌಕರರ ಸಂದರ್ಭದಲ್ಲಿ ನಿಯಮಿತವಾಗಿ ಡಯಾಲಿಸಿಸ್ ಚಿಕಿತ್ಸೆಗೆ ಒಳಗಾಗಲು ಒಂದು ದಿನದ ವಿಶೇಷ ಸಾಂದರ್ಭಿಕ ರಜೆಯ ಮಂಜೂರಾತಿಯ ಬಗ್ಗೆ.

**ನಿರ್ಣಯ:**

ಸರ್ಕಾರದ ಆದೇಶ ಸಂಖ್ಯೆ ಎಫ್ಡಿ 5(ಇ) ಎಸ್‌ಆರ್‌ಎಸ್ 2020 ದಿನಾಂಕ: 12.08.2020ರಂತೆ, ಕಿಡ್ನಿ (ವೈಪಲ್ಯ) ಕಾಯಿಲೆಯಿಂದ ಬಳಲುತ್ತಿರುವ ಸರ್ಕಾರಿ ನೌಕರರ ಸಂದರ್ಭದಲ್ಲಿ ನಿಯಮಿತವಾಗಿ ಡಯಾಲಿಸಿಸ್ ಚಿಕಿತ್ಸೆಗೆ ಒಳಗಾಗಲು ಒಂದು ದಿನದ ವಿಶೇಷ ಸಾಂದರ್ಭಿಕ ರಜೆಯನ್ನು ವಿಶ್ವವಿದ್ಯಾಲಯದ ನೌಕರರಿಗೂ ಸಹ ಅನ್ವಯಿಸಿ ಮಂಜೂರು ಮಾಡಲು ಸಿಂಡಿಕೇಟ್ ಅನುಸಮರ್ಥಿಸಿತು.

*Proceedings of the 168th meeting of the Syndicate held on 12.06.2023*

**Item No. 23** Financial support to file patent from the Dept. of Microbiology and Biotechnology. BUB.

***Resolution:***

After detailed discussion, the Syndicate resolved to ratify the action taken by the University in sanctioning Rs.52,980/- to Dr. J. Savitha vide University Order No. DEV;D2;PATENT-3/Dr.J.S/MBT/2022-23, dated:09.03.2023.

*Proceedings of the 168th meeting of the Syndicate held on 12.06.2023*

**ವಿಷಯ ಸಂಖ್ಯೆ 24:** ಮೈಸೂರು ರಸ್ತೆಯ ವೃಷಭಾವತಿ ನಾಲೆಗೆ ಅಡ್ಡವಾಗಿ ನೂತನ ಸೇತುವೆ ನಿರ್ಮಾಣ ಮಾಡುವ ಬಗ್ಗೆ.

**ನಿರ್ಣಯ:**

ಮೈಸೂರು ರಸ್ತೆಯ ವೃಷಭಾವತಿ ನಾಲೆಗೆ ಅಡ್ಡವಾಗಿ ನೂತನ ಸೇತುವೆ ನಿರ್ಮಾಣ ಮಾಡುವ ವಿಷಯದಲ್ಲಿ ಪರಾಮರ್ಶಿತ ಟಿಪ್ಪಣಿಯಲ್ಲಿ ನಮೂದಿಸಿರುವಂತೆ ತೆಗೆದುಕೊಂಡಿರುವ ಕ್ರಮಗಳನ್ನು ಸಿಂಡಿಕೇಟ್ ಅನುಮೋದಿಸಿತು.

*Proceedings of the 168th meeting of the Syndicate held on 12.06.2023*

**ವಿಷಯ ಸಂಖ್ಯೆ 25:** ಬೆಂಗಳೂರು ವಿಶ್ವವಿದ್ಯಾಲಯದ ಸಂವಹನ ವಿಭಾಗದ ಪ್ರಾಧ್ಯಾಪಕರಾದ ಡಾ. ಬಿ.ಕೆ. ರವಿ, ಇವರನ್ನು ಕೊಪ್ಪಳ ವಿಶ್ವವಿದ್ಯಾಲಯ, ಕೊಪ್ಪಳ, ಕುಲಪತಿ ಹುದ್ದೆಗೆ ನೇಮಕ ಮಾಡಲಾಗಿ, ಸರ್ಕಾರದ ಆದೇಶದ ಮೇರೆಗೆ ಬೆಂಗಳೂರು ವಿಶ್ವವಿದ್ಯಾಲಯದಿಂದ ಬಿಡುಗಡೆ ಮಾಡಿರುವ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗೆ ಮಂಡಿಸುವ ಬಗ್ಗೆ.

**ನಿರ್ಣಯ:**

ಬೆಂಗಳೂರು ವಿಶ್ವವಿದ್ಯಾಲಯದ ಸಂವಹನ ವಿಭಾಗದ ಪ್ರಾಧ್ಯಾಪಕರಾದ ಡಾ. ಬಿ.ಕೆ. ರವಿ, ಇವರನ್ನು ಕೊಪ್ಪಳ ವಿಶ್ವವಿದ್ಯಾಲಯ, ಕೊಪ್ಪಳ, ಕುಲಪತಿ ಹುದ್ದೆಗೆ ನೇಮಕ ಮಾಡಲಾಗಿ, ಸರ್ಕಾರದ ಆದೇಶದ ಮೇರೆಗೆ ಬೆಂಗಳೂರು ವಿಶ್ವವಿದ್ಯಾಲಯದಿಂದ ಬಿಡುಗಡೆ ಮಾಡಿರುವ ವಿಷಯವನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು ಹಾಗೂ ಕುಲಪತಿಗಳಾಗಿ ನೇಮಕೊಂಡಿರುವ ಡಾ. ಬಿ.ಕೆ. ರವಿ ಅವರಿಗೆ ಅಭಿನಂದನೆಗಳನ್ನು ದಾಖಲಿಸಿತು.

*Proceedings of the 168th meeting of the Syndicate held on 12.06.2023*

**ವಿಷಯ ಸಂಖ್ಯೆ 26:** 2022–23ನೇ ಸಾಲಿನಿಂದ ಎನ್.ಎಂ.ಕೆ.ಆರ್.ವಿ ಮಹಿಳಾ ಕಾಲೇಜಿನ ಸ್ವಾಯತ್ತತೆಯ ನವೀಕರಣವನ್ನು ಮಂಜೂರು ಮಾಡುವ ಸಲುವಾಗಿ ರಚಿಸಲಾಗಿದ್ದ ಸ್ಥಾಯಿ ಸಮಿತಿಯ ವರದಿಯನ್ನು ಪರಿಗಣಿಸುವ ಬಗ್ಗೆ.

**ನಿರ್ಣಯ:**

2022–23ನೇ ಸಾಲಿನಿಂದ ಎನ್.ಎಂ.ಕೆ.ಆರ್.ವಿ ಮಹಿಳಾ ಕಾಲೇಜಿನ ಸ್ವಾಯತ್ತತೆಯ ನವೀಕರಣವನ್ನು ಮಂಜೂರು ಮಾಡುವ ಸಲುವಾಗಿ ರಚಿಸಲಾಗಿದ್ದ ಸ್ಥಾಯಿ ಸಮಿತಿಯ ವರದಿಯನ್ನು ಸಿಂಡಿಕೇಟ್ ಪರಿಗಣಿಸಿ ಅನುಮೋದಿಸಿತು.

*Proceedings of the 168th meeting of the Syndicate held on 12.06.2023*

**ವಿಷಯ ಸಂಖ್ಯೆ 27:** ಯು.ವಿ.ಸಿ.ಇ ವಿಶ್ವವಿದ್ಯಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ದಿನಗೂಲಿ ನೌಕರರು, ಬೆಂಗಳೂರು ವಿಶ್ವವಿದ್ಯಾಲಯದಲ್ಲೇ ಅವರುಗಳ ಸೇವೆಯನ್ನು ಮುಂದುವರೆಸುವ ಬಗ್ಗೆ.

ಶ್ರೀ ಉದಯ ಕುಮಾರ್ ಎಂ ಅವರು ಮಾತನಾಡಿ, ಈ ಹಿಂದೆ ಬೆಂಗಳೂರು ನಗರ ವಿಶ್ವವಿದ್ಯಾಲಯ ಹಾಗೂ ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ರಚಿತವಾದಾಗ, ದಿನಗೂಲಿ ಆದಾರದ ಮೇಲೆ ಸೆಂಟ್ರಲ್ ಕಾಲೇಜು ಹಾಗೂ ಕೋಲಾರ ಸ್ನಾತಕೋತ್ತರ ಕೇಂದ್ರದಲ್ಲಿ ಕೆಲಸ ನಿರ್ವಹಿಸುತ್ತಿದ್ದ ಸಿಬ್ಬಂದಿಯನ್ನು ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣಕ್ಕೆ ವರ್ಗಾವಣೆ ಮಾಡಲಾಗಿತ್ತು. ಅದೆ ಮಾನದಂಡವನ್ನು ಅನುಸರಿಸಿ, ಕೋಲಾರ ಹಾಗೂ ಬೇರೆ ವಿಭಾಗಗಳಿಂದ ಯು.ವಿ.ಸಿ.ಇ.ಗೆ ವರ್ಗಾಯಿಸಿರುವ ದಿನಗೂಲಿ ನೌಕರರ ಸೇವೆಯನ್ನು ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದ ವಿಭಾಗಗಳಿಗೆ ವರ್ಗಾಯಿಸಬೇಕೆಂದು ಒತ್ತಾಯಿಸಿದರು.

**ನಿರ್ಣಯ:**

ಚರ್ಚೆಯ ನಂತರ, ಬೆಂಗಳೂರು ವಿಶವಿದ್ಯಾಲಯದ ಸ್ನಾತಕೋತ್ತರ ಕೇಂದ್ರ, ಕೋಲಾರ ಹಾಗೂ ವಿಶ್ವವಿದ್ಯಾಲಯದ ಇತರ ವಿಭಾಗ/ಕಛೇರಿಗಳಲ್ಲಿ ಪ್ರಾರಂಭದ ಹಂತದಲ್ಲಿ ದಿನಗೂಲಿ ನೌಕರರಾಗಿ ಕೆಲಸ ನಿರ್ವಹಿಸಿ ಪ್ರಸ್ತುತ ಯು.ವಿ.ಸಿ.ಇ.ಯಲ್ಲಿ ಕಾರ್ಯನಿರ್ವಹಿಸುತ್ತಿರುವ ತಾಂತ್ರಿಕೇತರ ದಿನಗೂಲಿ ನೌಕರರುಗಳನ್ನು ಬೆಂಗಳೂರು ವಿಶ್ವವಿದ್ಯಾಲಯದ ಇತರ ವಿಭಾಗ/ಕಛೇರಿಗಳಲ್ಲಿ ಕರ್ತವ್ಯಕ್ಕೆ ಹಾಜರಾಗಲು ಸಿಂಡಿಕೇಟ್ ಅನುಮೋದಿಸಿತು.

*Proceedings of the 168th meeting of the Syndicate held on 12.06.2023*

**Item No. 28:** Permission to Sri Guru Raghavendra K.M, Research Scholar, Dept. of Economics to attend the international Conference to be held at Malasia reg.

**Resolution:**

The Syndicate resolved to sanction permission to Sri Guru Raghavendra K.M, Research Scholar, Dept. of Economics for having attended the international

Conference - 'MAJCAFE International Post graduate Conference 2023' to be held at Malasia.

***Proceedings of the 168th meeting of the Syndicate held on 12.06.2023***

**ವಿಷಯ ಸಂಖ್ಯೆ 29:** 2022–23ನೇ ಸಾಲಿಗೆ ಅಮಿತ ಶಿಕ್ಷಣ ಕಾಲೇಜು ಹಾಗೂ ಬಸವೇಶ್ವರ ಶಿಕ್ಷಣ ಮಹಾವಿದ್ಯಾಲಯ ಇವುಗಳ ಸಂಯೋಜನಾ ನವೀಕರಣದಲ್ಲಿ ಪ್ರೊ. ಸುರೇಶ್ ವಿ. ನಾಡಗೌಡರ್, ಡೀನರು, ಕಾನೂನು ನಿಕಾಯ ಇವರ ಅಧ್ಯಕ್ಷತೆಯಲ್ಲಿನ ಸ್ಥಳೀಯ ವಿಚಾರಣಾ ಸಮಿತಿಯ ವರದಿಯನ್ನು ಪರಿಗಣಿಸುವ ಬಗ್ಗೆ.

**ನಿರ್ಣಯ:**

2022–23ನೇ ಸಾಲಿಗೆ ಅಮಿತ ಶಿಕ್ಷಣ ಕಾಲೇಜು ಹಾಗೂ ಬಸವೇಶ್ವರ ಶಿಕ್ಷಣ ಮಹಾವಿದ್ಯಾಲಯ ಇವುಗಳ ಸಂಯೋಜನಾ ನವೀಕರಣದಲ್ಲಿ ಪ್ರೊ. ಸುರೇಶ್ ವಿ. ನಾಡಗೌಡರ್, ಡೀನರು, ಕಾನೂನು ನಿಕಾಯ ಇವರ ಅಧ್ಯಕ್ಷತೆಯಲ್ಲಿನ ಸ್ಥಳೀಯ ವಿಚಾರಣಾ ಸಮಿತಿಯ ವರದಿಯನ್ನು ಸಿಂಡಿಕೇಟ್ ಪರಿಗಣಿಸಿ ಅನುಮೋದಿಸಿತು.

***Proceedings of the 168th meeting of the Syndicate held on 12.06.2023***

**ವಿಷಯ ಸಂಖ್ಯೆ 30:** ದಿನಾಂಕ 04.03.2023 ರಂದು ನಡೆದ 38ನೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ಕಲ್ಯಾಣ ಮತ್ತು ಸುಧಾರಣಾ ಸಮಿತಿ ಸಭೆಯ ನಡಾವಳಿಗಳನ್ನು ಸಿಂಡಿಕೇಟ್ ಸಭೆಯ ಅನುಮೋದನೆ ಪಡೆಯುವ ಬಗ್ಗೆ.

**ನಿರ್ಣಯ:**

ದಿನಾಂಕ 04.03.2023 ರಂದು ನಡೆದ 38ನೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ಕಲ್ಯಾಣ ಮತ್ತು ಸುಧಾರಣಾ ಸಮಿತಿ ಸಭೆಯ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದ ಶಿಫಾರಸ್ಸುಗಳನ್ನು ಹೊರತುಪಡಿಸಿ, ಉಳಿದ ವಿಷಯಗಳಿಗೆ ಸಂಬಂಧಿಸಿದ ನಡಾವಳಿಗಳನ್ನು ಸಿಂಡಿಕೇಟ್ ಅನುಮೋದಿಸಿತು. ಮುಂದುವರೆದು, ಬೆಂಗಳೂರು ವಿಶ್ವವಿದ್ಯಾಲಯದ ವಿಭಾಗಗಳಲ್ಲಿ ನಡೆಸುತ್ತಿರುವ ಸ್ನಾತಕೋತ್ತರ ಡಿಪ್ಲೋಮಾ ಕೋರ್ಸುಗಳಿಗೆ ಪ್ರವೇಶ ಪಡೆಯುವ ಯಾವುದೇ ವಿದ್ಯಾರ್ಥಿಗಳಿಗೆ ಹಾಸ್ಟೆಲ್‌ಗಳಲ್ಲಿ ವಸತಿ/ಊಟೋಪಚಾರ ಹಾಗೂ ಇತರ ಯಾವುದೆ ಸೌಲಭ್ಯಗಳನ್ನು ನೀಡಬಾರದೆಂದು ಕಟ್ಟುನಿಟ್ಟಾಗಿ ಸೂಚಿಸಿತು. ಈ ರೀತಿ ಆದಲ್ಲಿ ಸಂಬಂಧಿಸಿದ ವಾರ್ಡನ್‌ಗಳನ್ನು ಜವಾಬ್ದಾರರಾಗುತ್ತಾರೆಂದು ಸಿಂಡಿಕೇಟ್ ನಿರ್ಣಯಿಸಿತು.

ಅ. ವಿಷಯ5: ವಿಶ್ವವಿದ್ಯಾಲಯದ ವಿವಿಧ ವಿಭಾಗಗಳು, ಸ್ನಾತಕೋತ್ತರ ಕೇಂದ್ರ ರಾಮನಗರ ಮತ್ತು ಸಂಯೋಜಿತ ಕಾಲೇಜುಗಳಿಗೆ ಎಸ್.ಸಿ/ಎಸ್.ಟಿ. ಬುಕ್ ಬ್ಯಾಂಕ್ ಯೋಜನೆಯಡಿ ಪುಸ್ತಕಗಳನ್ನು ವಿತರಿಸಲು ಅನುಮೋದನೆ ಪಡೆಯುವ ಬಗ್ಗೆ.

ವಿಶ್ವವಿದ್ಯಾಲಯದ ಪ್ರಸ್ತುತ ಹಣಕಾಸು ಸ್ಥಿತಿಯಿಂದಾಗಿ ಕಾಲೇಜುಗಳ ಗ್ರಂಥಾಲಯಗಳಿಗೆ ಪುಸ್ತಕಗಳನ್ನು ನೀಡದಿರಲು ಸಿಂಡಿಕೇಟ್ ನಿರ್ಣಯಿಸಿತು.

*Proceedings of the 168th meeting of the Syndicate held on 12.06.2023*

**Item No. 31** Establishment of Nandini parlour by KMF at Jnanabharathi Campus, Bangalore University, Bengaluru.

***Resolution:***

After detailed discussion, the Syndicate resolved to ratify the action taken by the University order dated: 22-06-2022 and letter dated:07-09-2022, for permission to establish Nandini parlour by KMF opposite to Muneshwara Temple, Jnanabharathi Campus, Bangalore University, Bengaluru.

*Proceedings of the 168th meeting of the Syndicate held on 12.06.2023*

**ವಿಷಯ ಸಂಖ್ಯೆ 32:** ಡಾ. ನೀಮಾಜ್ಞಾನದೇವ್ ರವರ ನೇಮಕಾತಿ ಅದೇಶವನ್ನು ರದ್ದುಗೊಳಿಸಿರುವ ವಿ.ವಿ ಆದೇಶವನ್ನು ಹಿಂಪಡೆದು ಮರು ಅದೇಶವನ್ನು ನೀಡುವಂತೆ ಸದರಿ ಶಿಕ್ಷಕರು ಸಲ್ಲಿಸಿರುವ ಮನವಿ ಪತ್ರದ ಬಗ್ಗೆ.

**ನಿರ್ಣಯ:**

ವಿಷಯವನ್ನು ಮುಂದೂಡಲಾಯಿತು.

*Proceedings of the 168th meeting of the Syndicate held on 12.06.2023*

**Item No. 33** Permission to lay Jio Digital Optical Fibre Cable below the footpath from Ullal Junction, Bangalore University Campus to Vice-Chancellor's Residence backside transmission tower through HDD method.

***Resolution:***

After detailed discussion, the Syndicate resolved to defer the matter with a direction to submit the all the matters.

***Proceedings of the 168th meeting of the Syndicate held on 12.06.2023***

**ವಿಷಯ ಸಂಖ್ಯೆ 34:** ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಬಾಕಿಯಿರುವ ಆಡಿಟ್ ಕಂಡಿಕೆಗಳಿಗೆ ಸಂಬಂಧಿಸಿದ ಕಾರ್ಯ ನಿರ್ವಹಿಸಲು KIPA (Karnataka Institute of Public Auditors) ಸಂಸ್ಥೆಯಿಂದ ಹೊರಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ನೇಮಿಸಿಕೊಂಡಿರುವ ಓರ್ವ ಲೆಕ್ಕಪರಿಶೋಧನಾಧಿಕಾರಿ (ನಿ) ಹಾಗೂ ಓರ್ವ ಲೆಕ್ಕ ಅಧೀಕ್ಷಕರು (ನಿ) ಇವರುಗಳನ್ನು ಮತ್ತೊಂದು ವರ್ಷದ ಅವಧಿಗೆ ಮುಂದುವರೆಸುವ ಬಗ್ಗೆ.

**ನಿರ್ಣಯ:**

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಬಾಕಿಯಿರುವ ಆಡಿಟ್ ಕಂಡಿಕೆಗಳಿಗೆ ಉತ್ತರಗಳನ್ನು ಸಿದ್ದಪಡಿಸಲು ಹಗೂ ಸಂಬಂಧಪಟ್ಟ ಕಾರ್ಯ ನಿರ್ವಹಿಸಲು ಓರ್ವ ಲೆಕ್ಕಪರಿಶೋಧನಾಧಿಕಾರಿ (ನಿ) ಹಾಗೂ ಓರ್ವ ಲೆಕ್ಕ ಅಧೀಕ್ಷಕರು (ನಿ) ಇವರುಗಳ ಸೇವೆಯನ್ನು ದಿನಾಂಕ; 01-06-2023ರಿಂದ ಒಂದು ವರ್ಷದ ಅವಧಿಗೆ ಪಡೆಯಲು ಸಿಂಡಿಕೇಟ್ ಅನುಮೋದಿಸಿತು.

***Proceedings of the 168th meeting of the Syndicate held on 12.06.2023***

**Item No35:** Nomination of three experts in the subject and /or allied subjects to the faculty of Commerce, Bangalore University, Bangalore for re-constitution of the Faculty-reg.

***Resolution:***

After detailed discussion, the Syndicate resolved to nominate following three experts to the faculty of Commerce, Bangalore University, Bangalore for a period of two years:

1. Dr. Usha, Chairperson, Dept. of Commerce, KSOU, Muktha Gangothri, Mysuru-570 006.
2. Dr. Ishwara P, Professor, Mangalore University, Mudipu, Konaje, Mangalagangotri, Mangaluru-574 142.
3. Sri Amareeesh Gadagi, Manager, LKQ India Pvt Ltd., 7th Floor, Primeco Tower, Arekeregate, Bengaluru-560 076.

***Proceedings of the 168th meeting of the Syndicate held on 12.06.2023***

**ವಿಷಯ ಸಂಖ್ಯೆ 36:** ಬೆಂಗಳೂರು ವಿಶ್ವವಿದ್ಯಾಲಯ ನೌಕರರ ಮಕ್ಕಳಿಗೆ ಮಕ್ಕಳಿಗೆ ನೀಡಲಾಗುತ್ತಿರುವ ಶುಲ್ಕ ವಿನಾಯಿತಿಯನ್ನು 2022-23ನೇ ಸಾಲಿಗೆ ನೌಕರರಿಗೆ ಮರುಪಾವತಿಸುವ ಬಗ್ಗೆ.

**ನಿರ್ಣಯ:**

ಬೆಂಗಳೂರು ವಿಶ್ವವಿದ್ಯಾಲಯ ನೌಕರರ ಮಕ್ಕಳಿಗೆ ಮಕ್ಕಳಿಗೆ ನೀಡಲಾಗುತ್ತಿರುವ ಶುಲ್ಕ ವಿನಾಯಿತಿಯನ್ನು ನೀಡುವ ಕುರಿತು ಪರಿನಿಯಮಾವಳಿಯನ್ನು ರಚಿಸಿ, ಸರ್ಕಾರದ ಅನುಮೋದನೆಯ ನಂತರ, 2022-23ನೇ

ಸಾಲಿಗೆ ನೀಡಿರುವ ಶುಲ್ಕ ವಿನಾಯಿತಿ ಮರುಪಾವತಿಯ ಬಗ್ಗೆ ಮನವಿಯನ್ನು ಪರಿಗಣಿಸಬೇಕೆಂದು ಸಿಂಡಿಕೇಟ್ ಸೂಚಿಸಿತು.

***Proceedings of the 168th meeting of the Syndicate held on 12.06.2023***

**ವಿಷಯ ಸಂಖ್ಯೆ 37**:ಕಳೆದ ಹತ್ತು ವರ್ಷಗಳಿಂದ ತಡೆಹಿಡಿಯಲಾಗಿರುವ ಬಡ್ತಿ ಹಾಗೂ ಬೋಧನಾ ಕೆಲಸವನ್ನು ಬಿಡುಗಡೆ ಮಾಡುವ ಬಗ್ಗೆ ಡಾ. ಕಾ.ವೆಂ. ಶ್ರೀನಿವಾಸ ಮೂರ್ತಿ, ಸಹ ಪ್ರಾಧ್ಯಾಪಕರು ಮತ್ತು ಸಮನ್ವಯಾಧಿಕಾರಿಗಳು, ದೂರ ಶಿಕ್ಷಣ ನಿರ್ದೇಶನಾಲಯ ಇವರು ಸಲ್ಲಿಸಿರುವ ಮನವಿ ಪತ್ರ.

**ನಿರ್ಣಯ:**

ಸಿಂಡಿಕೇಟ್ ಪರಾಮರ್ಶಿತ ಟಿಪ್ಪಣಿಯಲ್ಲಿನ ಅಂಶಗಳನ್ನು ಗಮನಿಸಿ, ದಿನಾಂಕ: 21-11-2014ರಿಂದ ಡಾ. ಕಾ.ವೆಂ. ಶ್ರೀನಿವಾಸ ಮೂರ್ತಿ, ಸಹ ಪ್ರಾಧ್ಯಾಪಕರು ಇವರು ಶಿಕ್ಷೆ ಅನುಭವಿಸುತ್ತಿದ್ದು. ಇಲ್ಲಿಯವರೆವಿಗೂ ಯಾವುದೇ ಬೋಧನಾ ಕಾರ್ಯವಿಲ್ಲದೇ ದೂರ ಶಿಕ್ಷಣ ನಿರ್ದೇಶನಾಲಯದಲ್ಲಿ ಸಮನ್ವಯಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವುದರಿಂದ, ಅವರಿಗೆ ನೀಡುತ್ತಿರುವ ವೇತನಕ್ಕೆ ಸಮಾನವಾಗಿ ಕೆಲಸ ಪಡೆದುಕೊಳ್ಳಲು ಅವರಿಗೆ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪಾಠ ಪ್ರವಚನ ಮಾಡಲು ಅವಕಾಶ ನೀಡುವ ಬಗ್ಗೆ ಮಾನ್ಯ ರಾಜ್ಯಪಾಲರ ನಿರ್ದೇಶನ ಕೋರಲು ಸಿಂಡಿಕೇಟ್ ನಿರ್ಣಯಿಸಿತು.

ಈ ಹಂತದಲ್ಲಿ ಶ್ರೀ ಉದಯಕುಮಾರ್ ಎಂ ಅವರು ಮಾತನಾಡಿ, ಸದರಿ ಶಿಕ್ಷಕರು ಕಳೆದ 10 ವರ್ಷಗಳಿಂದ ಶಿಕ್ಷೆ ಅನುಭವಿಸಿರುವುದರಿಂದ, ಅವಕಾಶವಿದ್ದರೆ, ಘನತೆವೆತ್ತ ರಾಜ್ಯ ಪಾಲರಿಗೆ ಮನವಿ ಸಲ್ಲಿಸಿ ಅವರಿಗೆ ಸಲ್ಲಬೇಕಾದ ಮುಂಬಡ್ತಿ ನೀಡುವ ಬಗ್ಗೆ ಪರಿಶೀಲಸಬೇಕೆಂದು ತಿಳಿಸಿದರು.

***Proceedings of the 168th meeting of the Syndicate held on 12.06.2023***

**ವಿಷಯ ಸಂಖ್ಯೆ 38**: 2023-24ನೇ ಸಾಲಿಗೆ ಸಂಯೋಜಿತ ಕಾಲೇಜುಗಳ ಪರೀಕ್ಷಣೆಗಾಗಿ ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸುವ ಬಗ್ಗೆ.

ಶ್ರೀ ಉದಯ ಕುಮಾರ್ ಎಂ ಅವರು ಮಾತನಾಡಿ, ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:5645/2023 (***GEM-RES***)ರಲ್ಲಿ ದಿನಾಂಕ; 06-04-2023ರಂದು, ಸರ್ಕಾರವು ಹೊರಡಿಸಿರುವ ಸುತ್ತೋಲೆ ಸಂಖ್ಯೆ ಇಡಿ 94 ಯುಜಿವಿ 2023 ದಿನಾಂಕ: 24-11-2022ಮೇಲೆ ಕ್ರಮ ಕೈಗೊಳ್ಳದಿರಲು ಸೂಚಿಸಿದೆ. ಆದಕಾರಣ, 2023-24ನೇ ಸಾಲಿನ ಸ್ಥಳೀಯ ವಿಚಾರಣಾ ಸಮಿತಿಗಳನ್ನು ಸಿಂಡಿಕೇಟ್ ಸದಸ್ಯರ ನೇತೃತ್ವದಲ್ಲೇ ರಚಿಸಬೇಕೆಂದು ತಿಳಿಸಿ ಮಾನ್ಯ ಉಚ್ಚನ್ಯಾಯಾಲಯದ ಮಧ್ಯಂತರ ಆದೇಶದ ಪ್ರತಿಯನ್ನು ಸಿಂಡಿಕೇಟಿನ ಗಮನಕ್ಕೆ ತಂದರು.

**ನಿರ್ಣಯ:**

ಚರ್ಚೆಯ ನಂತರ, 2023–24ನೇ ಸಾಲಿಗೆ ಸಂಯೋಜನಾ ಪ್ರಕ್ರಿಯೆಯ ಬಗ್ಗೆ ದಿನಾಂಕ:15–05–2023ರ ಪರಿಷ್ಕೃತ ಅಧಿಸೂಚನೆಯ ಹಾಗೂ ಶುಲ್ಕಗಳ ಸ್ಲಾಬ್ ಆಧಾರದ ಮರುನಿಗದಿ ಮಾಡಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು. ಮುಂದುವರೆದು, 2023–24ನೇ ಸಾಲಿನ ಸ್ಥಳೀಯ ವಿಚಾರಣಾ ಸಮಿತಿಗಳನ್ನು ಮಾನ್ಯ ಉಚ್ಚನ್ಯಾಯಾಲಯದ ಆದೇಶದ ಕುರಿತು ಕಾನೂನು ಅಭಿಪ್ರಾಯ ಪಡೆದು, ಅದರ ಪ್ರಕಾರ ಆದಷ್ಟು ಬೇಗ ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸಿ ಕಾಲೇಜುಗಳ ಪರಿವೀಕ್ಷಣೆಯನ್ನು ಶೀಘ್ರವಾಗಿ ಪೂರ್ಣಗೊಳಿಸಲು ಸಿಂಡಿಕೇಟ್ ನಿರ್ಣಯಿಸಿತು.



**ವಿಷಯ ಸಂಖ್ಯೆ 39**: ಡಾ. ರವಿಚಂದ್ರ ಕುಮಾರ. ಎಂ.ಪಿ ಸಂಶೋಧನಾ ವಿದ್ಯಾರ್ಥಿ, ವಿದ್ಯುನ್ಮಾನ ಮಾಧ್ಯಮ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು ಇವರ ಐದನೇ ವರ್ಷದ ಡಾ. ಬಿ.ಆರ್. ಅಂಬೇಡ್ಕರ್ ವಿದ್ಯಾರ್ಥಿವೇತನ ಮತ್ತು ಮೂರು ವರ್ಷದ ಸಾದಿಲ್ವಾರು ವೆಚ್ಚ ಮಂಜೂರು ಮಾಡುವ ಬಗ್ಗೆ.

ಮತ್ತು

**ವಿಷಯ ಸಂಖ್ಯೆ 40**: ಶ್ರೀ ದಿವಾಕರ.ಡಿ, ಸಂಶೋಧನಾ ವಿದ್ಯಾರ್ಥಿ, ಅರ್ಥಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಇವರಿಗೆ ಐದನೇ ವರ್ಷದ ಡಾ. ಬಿ.ಆರ್. ಅಂಬೇಡ್ಕರ್ ವಿದ್ಯಾರ್ಥಿವೇತನವನ್ನು ಮಂಜೂರು ಮಾಡುವ ಬಗ್ಗೆ.

**ನಿರ್ಣಯ:**

ಡಾ. ರವಿಚಂದ್ರ ಕುಮಾರ ಎಂ.ಪಿ., ಅವರು, ಈಗಾಗಲೇ ಪಿ.ಎಚ್.ಡಿ. ಸಂಶೋಧನಾ ಪ್ರಬಂಧ ಸಲ್ಲಿಸುವ ಸಮಯದಲ್ಲಿ, ಗೌರವಧನ ಪಡೆದಿರುವುದನ್ನು ಸಿಂಡಿಕೇಟ್ ಗಮನಿಸಿತು. ಮೇಲ್ಕಂಡ ಎರಡು ವಿದ್ಯಾರ್ಥಿಗಳು ಅವರ ಸಂಶೋಧನಾ ಕಾರ್ಯ ಮುಗಿದ ಬಹಳ ಅವಧಿಯ ನಂತರ ಡಾ. ಬಿ.ಆರ್. ಅಂಬೇಡ್ಕರ್ ವಿದ್ಯಾರ್ಥಿವೇತನವನ್ನು ಮಂಜೂರು ಮಾಡಲು ಮನವಿ ಸಲ್ಲಿಸಿರುತ್ತಾರೆ. ಈ ಮನವಿಯನ್ನು ಪುರಸ್ಕರಿಸಿದರೆ ಲೆಕ್ಕಪರಿಶೋಧಕರ ಆಕ್ಷೇಪಣೆಗೆ ಒಳಗಾಗುವುದರಿಂದ ಹಾಗೂ ಅವಧಿ ಮೀರಿ ಅರ್ಜಿ ಸಲ್ಲಿಸಿರುವುದರಿಂದ, ಆಯಾ ಮಾಸ/ಅವಧಿಯಲ್ಲೇ ವಿದ್ಯಾರ್ಥಿ ವೇತನ ಪಡೆಯದಿರುವುದರಿಂದ ಅವರುಗಳಿಗೆ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡುವ ಬಗ್ಗೆ ವಿತ್ತಾಧಿಕಾರಿಯವರ ಅಭಿಪ್ರಾಯ ಕೋರಲು ಸಿಂಡಿಕೇಟ್ ನಿರ್ಣಯಿಸಿತು.

ಮುಂದುವರೆದು, ಎಲ್ಲಾ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ಆಯಾ ಮಾಸದಲ್ಲೇ, ವಿದ್ಯಾರ್ಥಿ ವೇತನ ಮಂಜೂರು ಮಾಡಿಸಿಕೊಳ್ಳಬೇಕೆಂದು ಒಂದು ಸುತ್ತೋಲೆ ಹೊರಡಿಸಲು ಸಿಂಡಿಕೇಟ್ ಸೂಚಿಸಿತು.

**ವಿಷಯ ಸಂಖ್ಯೆ 41**: ಎನ್.ಸಿ.ಸಿ ಸಂಸ್ಥೆಗೆ ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಜಾಗವನ್ನು ನೀಡುವ ಕುರಿತು.

ಎನ್.ಸಿ.ಸಿ ಸಂಸ್ಥೆಗೆ ಈಗಾಗಲೇ ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ನಾಯಂಡಳ್ಳಿ ಗ್ರಾಮದ ಸರ್ವೆ ನಂ.71ರಲ್ಲಿ 2 ಎಕರೆ ಜಮೀನನ್ನು ನೀಡಿರುವುದರಿಂದ, ಸದರಿ ಜಮೀನನ್ನು ಉಪಯೋಗಿಸಿಕೊಂಡಿರುವ ಬಗ್ಗೆ ಹಾಗೂ ಸದರಿ ಜಾಗದಲ್ಲಿ ಫೈಯರಿಂಗ್ ರೇಂಜ್ ಮತ್ತು ಅಬ್ಸ್ಟಕಲ್ ಕೋರ್ಸ್ ಟ್ರೈನಿಂಗ್ ಉಪಕರಣಗಳನ್ನು ಅಳವಡಿಸಲು ಸಾಧ್ಯವಿಲ್ಲವೇ ಎಂಬುದರ ಬಗ್ಗೆ ಸಿಂಡಿಕೇಟ್ ಮಾಹಿತಿ ಬಯಸಿತು.

**ನಿರ್ಣಯ:**

ಚರ್ಚೆಯನಂತರ, ವಿಷಯವನ್ನು ಮುಂದೂಡಲಾಯಿತು.

*Proceedings of the 168th meeting of the Syndicate held on 12.06.2023*

**ವಿಷಯ ಸಂಖ್ಯೆ 42**: ಕಾಲೇಜುಗಳ /ಸಂಸ್ಥೆಗಳಿಗೆ ಸಂಶೋಧನಾ ಕೇಂದ್ರದ ಮಾನ್ಯತೆ ನೀಡಲು ರಚಿಸಲ್ಪಟ್ಟ ಸಮಿತಿಯ ವರದಿಯನ್ನು ಪರಿಗಣಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯನಂತರ, ಕೆಳಕಂಡ ಕಾಲೇಜುಗಳ/ಸಂಸ್ಥೆಗಳಿಗೆ ಕುಲಪತಿಗಳ ಅಧ್ಯಕ್ಷತೆಯಲ್ಲಿ ಸಂಶೋಧನಾ ಕೇಂದ್ರದ ಹೊಸ ಮಾನ್ಯತೆ/ನವೀಕರಣ ನೀಡುವ ಬಗ್ಗೆ ರಚಿಸಲಾದ ಪರಿಣಿತರ ಸಮಿತಿಯ ವರದಿಗಳನ್ನು, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 66ರ ಅಡಿಯಲ್ಲಿ ಪರಿಗಣಿಸಿ ಅನುಮೋದಿಸಿತು.

| ಕ್ರ.ಸಂ. | ಕಾಲೇಜು/ಸಂಸ್ಥೆ | ವಿಷಯ |
|---|---|---|
| 1. | ಸುರಾನಾ ಕಾಲೇಜು (ಸ್ವಾಯತ್ತ),<br>ಸ್ನಾತಕೋತ್ತರ ಕೇಂದ್ರ, ಕೆಂಗೇರಿ, ಬೆಂಗಳೂರು.<br>(ವರದಿ ದಿನಾಂಕ: 13-01-2023) | **ಮನಃಶಾಸ್ತ್ರ, ಮ್ಯಾನೇಜ್ಮೆಂಟ್**<br>(2022-23ನೇ ಸಾಲಿನಿಂದ ಮಾನ್ಯತೆ ನವೀಕರಣ ಶಿಫಾರಸ್ಸು ಮಾಡಲಾಗಿದೆ) |
| 2. | ದಿ ಆಕ್ಸ್‌ಫರ್ಡ್ ಬಿಸಿನೆಸ್ ಮ್ಯಾನೇಜ್ಮೆಂಟ್ ಕಾಲೇಜು,<br>ಹೆಚ್.ಎಸ್.ಆರ್ ಬಡಾವಣೆ, ಬೆಂಗಳೂರು<br>(ವರದಿ ದಿನಾಂಕ: 13-01-2023) | **ಮ್ಯಾನೇಜ್ಮೆಂಟ್**<br>(2022-23ನೇ ಸಾಲಿನಿಂದ ಮಾನ್ಯತೆ ನವೀಕರಣ ಶಿಫಾರಸ್ಸು ಮಾಡಲಾಗಿದೆ) |
| 3. | ದಯಾನಂದ ಸಾಗರ್ ಕಲೆ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು,<br>ಕುಮಾರಸ್ವಾಮಿ ಬಡಾವಣೆ, ಬೆಂಗಳೂರು<br>(ವರದಿ ದಿನಾಂಕ: 03-02-2023) | **ಮ್ಯಾನೇಜ್ಮೆಂಟ್**<br>(2022-23ನೇ ಸಾಲಿನಿಂದ ಮಾನ್ಯತೆ ನವೀಕರಣ ಶಿಫಾರಸ್ಸು ಮಾಡಲಾಗಿದೆ) |
| 4. | ಎನ್.ಎಸ್.ಬಿ. ಅಕಾಡೆಮಿ,<br>ಸಿಂಗೇನ ಅಗ್ರಹಾರ, ಆನೇಕಲ್ ತಾಲ್ಲೂಕು, ಬೆಂಗಳೂರು.<br>(ವರದಿ ದಿನಾಂಕ: 13-01-2023) | **ಮ್ಯಾನೇಜ್ಮೆಂಟ್**<br>(2022-23ನೇ ಸಾಲಿನಿಂದ ಹೊಸ ಮಾನ್ಯತೆಗೆ ಶಿಫಾರಸ್ಸು ಮಾಡಲಾಗಿದೆ) |

| | | |
|---|---|---|
| 5. | ದಿ ಆಕ್ಸ್‌ಫರ್ಡ್ ವಿಜ್ಞಾನ ಕಾಲೇಜು,<br>ಹೆಚ್.ಎಸ್.ಆರ್ ಬಡಾವಣೆ, ಬೆಂಗಳೂರು<br>(ವರದಿ ದಿನಾಂಕ: 13–01–2023) | **ಜೀವರಸಾಯನಶಾಸ್ತ್ರ, ಸೂಕ್ಷ್ಮ ಜೀವಶಾಸ್ತ್ರ**<br>(2022–23ನೇ ಸಾಲಿನಿಂದ ಮಾನ್ಯತೆ ನವೀಕರಣ ಶಿಫಾರಸ್ಸು ಮಾಡಲಾಗಿದೆ)<br>*ಗಣಕ ವಿಜ್ಞಾನ ವಿಷಯದಲ್ಲಿ ಮಾನ್ಯತೆ ನವೀಕರಣಕ್ಕೆ ಶಿಫಾರಸ್ಸು ಮಾಡಲಾಗಿರುವುದಿಲ್ಲ* |
| 6. | ಐ.ಎಸ್.ಬಿ.ಆರ್. ಕಾಲೇಜು,<br>ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು.<br>(ವರದಿ ದಿನಾಂಕ: 13–01–2023) | **ಮ್ಯಾನೇಜ್ಮೆಂಟ್**<br>(2022–23ನೇ ಸಾಲಿನಿಂದ ಹೊಸ ಮಾನ್ಯತೆಗೆ ಶಿಫಾರಸ್ಸು ಮಾಡಲಾಗಿದೆ) |
| 7. | ಪದ್ಮಶ್ರೀ ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಅಂಡ್ ಸೈನ್ಸ್,<br>ಕೊಮ್ಮಘಟ್ಟ ಕೆಂಗೇರಿ, ಬೆಂಗಳೂರು<br>(ವರದಿ ದಿನಾಂಕ: 03–02–2023) | **ಮ್ಯಾನೇಜ್ಮೆಂಟ್**<br>(2022–23ನೇ ಸಾಲಿನಿಂದ ಹೊಸ ಮಾನ್ಯತೆಗೆ ಶಿಫಾರಸ್ಸು ಮಾಡಲಾಗಿದೆ) |
| 8. | ಡಾನ್ ಬಾಸ್ಕೋ ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಸ್ಟಡೀಸ್ ಅಂಡ್ ಕಂಪ್ಯೂಟರ್ ಅಪ್ಲಿಕೇಷನ್, ಕುಂಬಳಗೂಡು, ಬೆಂಗಳೂರು<br>(ವರದಿ ದಿನಾಂಕ: 03–02–2023) | **ಮ್ಯಾನೇಜ್ಮೆಂಟ್**<br>(2022–23ನೇ ಸಾಲಿನಿಂದ ಹೊಸ ಮಾನ್ಯತೆಗೆ ಶಿಫಾರಸ್ಸು ಮಾಡಲಾಗಿದೆ) |
| 9. | ಎನ್.ಎಂ.ಕೆ.ಆರ್.ವಿ. ಮಹಿಳಾ ಕಾಲೇಜು (ಸ್ವಾಯತ್ತ)<br>ಜಯನಗರ, ಬೆಂಗಳೂರು<br>(ವರದಿ ದಿನಾಂಕ: 21–02–2023) | **ರಸಾಯನಶಾಸ್ತ್ರ**<br>(2022–23ನೇ ಸಾಲಿನಿಂದ ಮಾನ್ಯತೆ ನವೀಕರಣ ಶಿಫಾರಸ್ಸು ಮಾಡಲಾಗಿದೆ) |



**ವಿಷಯ ಸಂಖ್ಯೆ 43**:ಬೆಂಗಳೂರು ವಿಶ್ವವಿದ್ಯಾಲಯದ ದಿನಗೂಲಿ/ಮಾಸಿಕ ಕ್ರೂಢಿಕೃತ ವೇತನ ನೌಕರರ ಸೇವೆಯನ್ನು ಮುಂದುವರೆಸುವ ಹಾಗೂ ವೇತನ ಹೆಚ್ಚಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯನಂತರ, ಸರ್ಕಾರದ ಆದೇಶ ಸಂಖ್ಯೆ ಸಿಅಸುಇ 16 ಸೇಸ್ಥ ಅ 2014, ಬೆಂಗಳೂರು ದಿನಾಂಕ; 10–01–2020ರಲ್ಲಿ ಕರ್ನಾಟಕ ರಾಜ್ಯದ ದಿನಗೂಲಿ ನೌಕರರಿಗೆ, ತುಟ್ಟಿ ಭತ್ಯೆ ಮತ್ತು ಮನೆ ಬಾಡಿಗೆ ಭತ್ಯೆಯನ್ನು ಪರಿಷ್ಕರಿಸಿ ಶೇ 75 ರಿಂದ ಶೇ 90ಕ್ಕೆ ನಿಗದಿಪಡಿಸಿರುವುದರಿಂದ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ದಿನಗೂಲಿ ನೌಕರರಿಗೂ ಸಹ ತುಟ್ಟಿ ಭತ್ಯೆ ಮತ್ತು ಮನೆ ಬಾಡಿಗೆ ಭತ್ಯೆಯನ್ನು ಶೇ 90ಕ್ಕೆ ನಿಗದಿಪಡಿಸಲು ಸಿಂಡಿಕೇಟ್ ಅನುಮೋದಿಸಿತು.

ಮುಂದುವರೆದು, ದಿನಗೂಲಿ ನೌಕರರ ಸೇವೆಯನ್ನು 2 ದಿನಗಳ ಕಾರ್ಯ ನಿರತ ದಿನಗಳ ಬಿಡುವು ನೀಡಿ ದಿನಾಂಕ: 09–06–2023 ಜಾರಿಗೆ ಬರುವಂತೆ ಒಂದು ವರ್ಷದ ಅವಧಿಗೆ ಅವರ ಸೇವೆಯನ್ನು ಮುಂದುವರೆಸಲು ಸಿಂಡಿಕೇಟ್ ನಿರ್ಣಯಿಸಿತು.

17/6/23

**Proceedings of the 168th meeting of the Syndicate held on 12.06.2023**

**ವಿಷಯ ಸಂಖ್ಯೆ 44**: ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಖಾಲಿ ಇದ್ದಂತಹ ವಿವಿಧ ವೃಂದದ ಬೋಧಕೇತರ ಹುದ್ದೆಗಳಿಗೆ ನೀಡಲಾಗಿರುವ ಮುಂಬಡ್ತಿ ಆದೇಶಗಳನ್ನು ಅನುಸಮರ್ಥಿಸುವ ಬಗ್ಗೆ.

ಶ್ರೀ ಉದಯ ಕುಮಾರ ಎಂ ಅವರು ಮಾತನಾಡಿ, ಸಹಾಯಕ ಹಾಗೂ ಉಪಕುಲಸಚಿವರ ಹುದ್ದೆಗೆ ಮುಂಬಡ್ತಿ ನೀಡಿರುವ ಕ್ರಮಕ್ಕೆ ಆಕ್ಷೇಪಣೆಯನ್ನು ವ್ಯಕ್ತಪಡಿಸಿ, ಸದರಿ ಹುದ್ದೆಗಳಿಗೆ ನೇಮಕಾತಿ ಪ್ರಾಧಿಕಾರವು ಸಿಂಡಿಕೇಟ್ ಆಗಿದ್ದು, ಮುಂಬಡ್ತಿಯ ಮೊದಲು ಸಿಂಡಿಕೇಟ್ ಪೂರ್ವಾನುಮೋದನೆಯನ್ನು ಪಡೆಯಬೇಕಾಗಿತ್ತೆಂದು ತಿಳಿಸಿದರು.

**ನಿರ್ಣಯ:**

ಚರ್ಚೆಯನಂತರ, ದಿನಾಂಕ: 23.05.2023ರ ಆದೇಶಗಳಲ್ಲಿ ಅಧೀಕ್ಷಕ, ಹಿರಿಯ ಸಹಾಯಕರ ವೃಂದಕ್ಕೆ ಖಾಲಿ ಇರುವ ಹುದ್ದೆಗಳಿಗೆ ಹಾಗೂ ಸಹಾಯಕರು ಹಾಗೂ ಕಿರಿಯ ಸಹಾಯಕರ ವೃಂದಕ್ಕೆ ಖಾಲಿ ಉಳಿದ ಮುಂಬಡ್ತಿ ಹುದ್ದೆಗಳು ಹಾಗೂ ನೇರ ನೇಮಕಾತಿ ನಡೆಯದೇ ಇರುವ ಕಾರಣ ಸದರಿ ಹುದ್ದೆಗಳಿಗೆ ಎದುರಾಗಿ ನೀಡಿರುವ ಮುಂಬಡ್ತಿ ಆದೇಶಗಳನ್ನು ಸಿಂಡಿಕೇಟ್ ಅನುಸಮರ್ಥಿಸಿತು.

ಮುಂದುವರೆದು, ಸಹಾಯಕ ಕುಲಸಚಿವರು ಹಾಗೂ ಉಪಕುಲಸಚಿವರ ಹುದ್ದೆಗೆ ಮುಂಬಡಿಯನ್ನು ಅನುಮೋದಿಸುವ ಕುರಿತು ವಿಷಯವನ್ನು ಡಿ.ಪಿ.ಸಿ. ವರದಿ, ಗೌಪ್ಯವರದಿಯ ವಿವರಗಳೊಂದಿಗೆ ಮುಂದಿನ ಸಿಂಡಿಕೇಟ್ ಸಭೆಗೆ ವಿವರಗಳನ್ನು ಮಂಡಿಸಲು ಸಿಂಡಿಕೇಟ್ ಸೂಚಿಸಿತು. ಮೇಲಿನ ಹುದ್ದೆಗಳ ಬಡ್ತಿಯ ಬಗ್ಗೆ ಸೂಕ್ತ ತೀರ್ಮಾನವಾಗದೆ ಕೆಳ ಹಂತದ ಹುದ್ದೆಗಳ ಬಡ್ತಿಗಳನ್ನು ಅನುಸಮರ್ಥಿಸಲು ತಾಂತ್ರಿಕವಾಗಿ ಸಾಧ್ಯವಾಗದ ಕಾರಣ, ಉಪಕುಲಸಚಿವ ಸಹಾಯಕ ಕುಲಸಚಿವರ ಹುದ್ದೆಗಳಿಗೆ ಮುಂಬಡ್ತಿಯ ಬಗ್ಗೆ ಸಿಂಡಿಕೇಟ್‌ಗೆ ಮಂಡಿಸಲು ನಿರ್ಣಯಿಸಿರುವುದರಿಂದ, ದಿನಾಂಕ 7.6.2023 ರ ಆದೇಶದಲ್ಲಿ ಅಧೀಕ್ಷಕ, ಹಿರಿಯ ಸಹಾಯಕ ಹಾಗೂ ಕಿರಿಯ ಸಹಾಯಕ ಹುದ್ದೆಗಳಿಗೆ ನೀಡಲಾಗಿರುವ ಮುಂಬಡ್ತಿಗಳ ಅನುಸಮರ್ಥನೆ ಬಗ್ಗೆಯೂ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಸಮಗ್ರವಾಗಿ ನಿರ್ಧಾರ ತೆಗೆದುಕೊಳ್ಳಲು ತೀರ್ಮಾನಿಸಲಾಯಿತು.

**Proceedings of the 168th meeting of the Syndicate held on 12.06.2023**

**ವಿಷಯ ಸಂಖ್ಯೆ 45**: ಡಾ. ಎಸ್.ಎಂ. ದಿಲೀಪ್‌ಕುಮಾರ್, ಕಂಪ್ಯೂಟರ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಭಾಗ, ಡಾ. ಬಿ. ಈರಯ್ಯ, ಪ್ರಾಧ್ಯಾಪಕರು, ಭೌತಶಾಸ್ತ್ರ ವಿಭಾಗ ಮತ್ತು ಡಾ. ಬಿ.ಪಿ. ಹರಿಣಿ, ಪ್ರಾಧ್ಯಾಪಕರು, ಪ್ರಾಣಿಶಾಸ್ತ್ರ ವಿಭಾಗ ಇವರನ್ನು ಸಿ.ಎ.ಎಸ್ ಅಡಿಯಲ್ಲಿ ಪ್ರಾಧ್ಯಾಪಕರಾಗಿ ಪರಿಗಣಿಸಲು ಕೋರಿರುವ ಬಗ್ಗೆ.

**ನಿರ್ಣಯ:**

ಚರ್ಚೆಯನಂತರ, ಬ್ಯಾಕ್‌ಲಾಗ್ ನೇಮಕಾತಿಯಡಿಯಲ್ಲಿ ಪ್ರಾಧ್ಯಾಪಕ ಹುದ್ದೆಗೆ ನೇಮಕಗೊಂಡಿರುವ ಡಾ. ಎಸ್.ಎಂ. ದಿಲೀಪ್‌ಕುಮಾರ್, ಕಂಪ್ಯೂಟರ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಭಾಗ, ಡಾ. ಬಿ. ಈರಯ್ಯ,

ಪ್ರಾಧ್ಯಾಪಕರು, ಭೌತಶಾಸ್ತ್ರ ವಿಭಾಗ ಮತ್ತು ಡಾ. ಬಿ.ಪಿ. ಹರಿಣಿ, ಪ್ರಾಧ್ಯಾಪಕರು, ಪ್ರಾಣಿಶಾಸ್ತ್ರ ವಿಭಾಗ ಇವರುಗಳ ಪರೀಕ್ಷಾರ್ಥ ಸೇವಾ ಅವಧಿಯು ಇನ್ನೂ ಘೋಷಣೆಯಾಗಿರದ ಕಾರಣ ಹಾಗೂ ಅವರ ನೇರ ನೇಮಕಾತಿ ಪ್ರಾಧ್ಯಾಪಕ ಹುದ್ದೆಯಲ್ಲಿ ಇನ್ನೂ ಖಾಯಂ ಆಗಿರದ ಕಾರಣ ಅವರ ಹಿಂದಿನ ಹುದ್ದೆಯನ್ನು ಹಿಂದಿನ ಸಿ.ಎ.ಎಸ್. ಪ್ರಾಧ್ಯಾಪಕ ಹುದ್ದೆ ಕಾಯ್ದುಕೊಂಡಿರುತ್ತಾರೆ. ಈ ಕಾರಣದಿಂದಾಗಿ, ಅವರುಗಳು ಸಿ.ಎ.ಎಸ್. ಅಡಿಯಲ್ಲಿ ಪ್ರಾಧ್ಯಾಪಕರಾಗಿ ಹಿಂದಿನ ಸೇವೆಯಲ್ಲೇ ಮುಂದುವರೆಯಲು ಮನವಿ ಸಲ್ಲಿಸಿರುವ ಮನವಿಯನ್ನು ಸಿಂಡಿಕೇಟ್ ಪರಿಗಣಿಸಿ ಅವರುಗಳು ಸಿ.ಎ.ಎಸ್. ಅಡಿಯಲ್ಲಿ ಪ್ರಾಧ್ಯಾಪಕರುಗಳಾಗಿ ಮುಂದುವರೆಯಲು ಸಿಂಡಿಕೇಟ್ ಅನುಮೋದಿಸಿತು.

***Proceedings of the 168th meeting of the Syndicate held on 12.06.2023***

**ವಿಷಯ ಸಂಖ್ಯೆ 46:** ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ.

**ನಿರ್ಣಯ:**

ಚರ್ಚೆಯನಂತರ, ಬೆಂಗಳೂರು ವಿಶ್ವವಿದ್ಯಾಲಯದ ಕೆಳಕಂಡ ವಿಭಾಗಗಳ, ಅವುಗಳ ಮುಂದೆ ನಮೂದಿಸಿರುವ ಶಿಕ್ಷಕರುಗಳನ್ನು ನಿಗದಿಪಡಿಸಿದ ದಿನಾಂಕದಿಂದ ವಿಭಾಗಗಳ ಅಧ್ಯಕ್ಷರು/ಸಂಚಾಲಕರುಗಳನ್ನಾಗಿ ನೇಮಿಸಲು ಸಿಂಡಿಕೇಟ್ ಅನುಮೋದಿಸಿತು.

| ಕ್ರ.ಸಂ. | ವಿಭಾಗ | ಶಿಕ್ಷಕರು | ಅನ್ವಯವಾಗುವ ದಿನಾಂಕ |
|---|---|---|---|
| 1. | ಸಮಾಜಶಾಸ್ತ್ರ ವಿಭಾಗ | ಡಾ. ಆರ್. ರಾಜೇಶ್, ಪ್ರಾಧ್ಯಾಪಕರು, | 27–07–2023 |
| 2. | ಸಸ್ಯಶಾಸ್ತ್ರ ವಿಭಾಗ | ಡಾ. ಹೆಚ್.ಆರ್. ರವೀಶ ಪ್ರಾಧ್ಯಾಪಕರು, | 27–07–2023 |
| 3. | ಭೂಗೋಳಶಾಸ್ತ್ರ ವಿಭಾಗ | ಡಾ. ಅಶೋಕ್ ಡಿ ಹಂಜಗಿ ಪ್ರಾಧ್ಯಾಪಕರು | 27–07–2023 |
| 4. | ಸಿ.ಬಿ.ಎಸ್.ಎಂ.ಎಸ್. ವಿಭಾಗ | ಡಾ. ವೈ ನಾಗರಾಜು, ಪ್ರಾಧ್ಯಾಪಕರು | 27–07–2023 |
| 5. | ದೈಹಿಕ ಶಿಕ್ಷಣ ಕಾಲೇಜು | ಡಾ. ಪಿ.ಸಿ. ಕೃಷ್ಣಸ್ವಾಮಿ ಪ್ರಾಧ್ಯಾಪಕರು | 27–07–2023 |
| 6. | ಇತಿಹಾಸ ವಿಭಾಗ | ಡಾ. ಎನ್. ಷೇಕ್ ಮಸ್ತಾನ್ ಅವರನ್ನು 07-06-2023ರಿಂದ ಇತಿಹಾಸ ವಿಭಾಗದ ಅಧ್ಯಕ್ಷರಾಗಿ ನೇಮಿಸಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು. ಮುಂದುವರೆದು, ಡಾ. ಕೆ.ಎಸ್. ವಿಜಯಲಕ್ಷ್ಮಿ ಅವರು ದಿನಾಂಕ:05-06-2021ರಿಂದ 26-07-2021ರ ವರೆಗೆ ಪ್ರಭಾರ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸಿರುವ ಅವಧಿಯನ್ನು ಪೂರ್ಣ ಪ್ರಮಾಣದ ಅವಧಿಯೆಂದು ಪರಿಗಣಿಸಲು ಸಿಂಡಿಕೇಟ್ ಅನುಮೋದಿಸಿತು | |
| | | ಡಾ. ಎಂ. ಶಶಿಧರ್ ಪ್ರಾಧ್ಯಾಪಕರು | 01-08-2023ರಿಂದ |

| | | | |
|---|---|---|---|
| 7. | ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ್ ವಿಭಾಗ | ಡಾ. ಎಂ. ರಘುನಂದನ್ ಪ್ರಾಧ್ಯಾಪಕರು | 01-10-2023 |
| 8. | ಹಿಂದಿ ವಿಭಾಗ | ಡಾ. ಶೇಖರ್ ಪ್ರಾಧ್ಯಾಪಕರು | 21-10-2023 |
| 9. | ಸಂಖ್ಯಾಶಾಸ್ತ್ರ ವಿಭಾಗ | ಡಾ. ಪರಮೇಶ್ವರ ವಿ ಪಂಡಿತ್ ಪ್ರಾಧ್ಯಾಪಕರು | 01-11-2023 |
| 10. | ತೆಲುಗು ವಿಭಾಗ | ಡಾ. ಆಶಾಜ್ಯೋತಿ ಪ್ರಾಧ್ಯಾಪಕರು | 21-10-2023 |
| 11. | ಉರ್ದು ವಿಭಾಗ | ಡಾ. ಪೋಲ್ ಅನುಪಮ ಸಹಾಯಕ ಪ್ರಾಧ್ಯಾಪಕರು | ಸಂಚಾಲಕರು 11-02-2023ರಿಂದ |
| 12. | ಉಡುಪು ತಂತ್ರಜ್ಞಾನ ವಿಭಾಗ | ಶ್ರೀಮತಿ ಆರ್ ವಿಧ್ಯಾ ಸಹಾಯಕ ಪ್ರಾಧ್ಯಾಪಕರು | ಸಂಚಾಲಕರು 21-10-2023 |
| 13. | ಮಾಲುಕ್ಯುಲಾರ್ ಬಯಾಲಜಿ | ಡಾ. ಎಲ್. ರಾಜಣ್ಣ ಸಸ್ಯಶಾಸ್ತ್ರ ವಿಭಾಗ | 21-10-2023 |

***Proceedings of the 168th meeting of the Syndicate held on 12.06.2023***

**Item No. 47:** Amendment of the existing Statute 21.2 of Bangalore University with regard to re-employment of superannuated teachers till the end of the respective semester.

***Resolution:***

As per recommendations of the Finance Committee, the Syndicate resolved to amend the existing Statute 21.2 of Bangalore University as detailed below.

| Existing | Proposed modification |
|---|---|
| 21.2 Age of retirement: Subject to the terms of any contract entered into under section 49 of the Act, a person appointed as the permanent teacher of the University shall be entitled to be in the service of the University until he/she completes the age of sixty years. If the age of superannuation is attained in the middle of the academic year, the teacher shall continue till the end of that academic year on re-employment basis subject to condition of such terms as specified by the University regarding physical fitness and payment etc., | 21.2 Age of retirement: Subject to the terms of any contract entered into under section 49 of KSU Act, 1976 or KSU Act 2000, a person appointed as the permanent teacher of the University until he/she completes the age of sixty two years. If the age of Superannuation is attained in the middle of the semester the teacher shall continue till the end of that respective semester only with an honorarium of Rs. 50,000/- P.M to the Retired Teachers, as per existing UGC guidelines F-25-01/2018 (PS/MIS) dated: 28.01.2019, on par with that of the Guest Faculty in the University and subsequent amendments thereof. |

*Proceedings of the 168th meeting of the Syndicate held on 12.06.2023*

**ವಿಷಯ ಸಂಖ್ಯೆ 48**: ದಿನಾಂಕ 18.04.2023 ರಂದು ನಡೆದ P.G Diploma and certificate ಕೋರ್ಸುಗಳ ಪ್ರವೇಶಾತಿ ಸಭೆಯ ನಡಾವಳಿಯ ಪ್ರಕಾರ ಕ್ರಮವಹಿಸುವ ಬಗ್ಗೆ.

**ನಿರ್ಣಯ:**

ಸಿಂಡಿಕೇಟ್ ಸಭೆಯು ದಿನಾಂಕ 18.04.2023 ರಂದು ನಡೆದ P.G Diploma and certificate ಕೋರ್ಸುಗಳ ಪ್ರವೇಶಾತಿ ಸಭೆಯ ನಡಾವಳಿಯನ್ನು ಪರಾಮರ್ಶಿಸಿತು. 2022–23ನೇ ಸಾಲಿಗೆ P.G Diploma and certificate ಕೋರ್ಸುಗಳ ಪ್ರವೇಶಾತಿಯ ಬಗ್ಗೆ ನೀಡಿರುವ ಅಧಿಸೂಚನೆಯನ್ನು ಅನುಸಮರ್ಥಿಸಿ, P.G Diploma in Clinical Embryology and Assisted Reproductive Technology ಕೋರ್ಸಿನ ವಿದ್ಯಾರ್ಥಿ ಪ್ರಮಾಣವನ್ನು 20 ರಿಂದ 30ಕ್ಕೆ ಹೆಚ್ಚಿಸಲು ಸಿಂಡಿಕೇಟ್ ಅನುಮೋದಿಸಿತು. ಮುಂದುವರೆದು, ಡಿಪ್ಲೊಮಾ ಕೋರ್ಸಿನ ವಿದ್ಯಾರ್ಥಿಗಳಿಗೆ ಊಟ ವಸತಿ ಕೈ ಖರ್ಚು ಹಾಗೂ ಹಾಸ್ಟೆಲ್ ಸೌಲಭ್ಯ ನೀಡಲು ನಿಯಮಾವಳಿಗಳಲ್ಲಿ ಅವಕಾಶವಿಲ್ಲದ ಕಾರಣ, ಬೆಂಗಳೂರು ವಿಶ್ವವಿದ್ಯಾಲಯದ ವಿಭಾಗಗಳಲ್ಲಿ ನಡೆಸುತ್ತಿರುವ ಸ್ನಾತಕೋತ್ತರ ಡಿಪ್ಲೋಮಾ ಕೋರ್ಸುಗಳಿಗೆ ಪ್ರವೇಶ ಪಡೆಯುವ ಯಾವುದೇ ವಿದ್ಯಾರ್ಥಿಗಳಿಗೆ ಹಾಸ್ಟೆಲ್‌ಗಳಲ್ಲಿ ವಸತಿ/ಊಟೋಪಚಾರ ಹಾಗೂ ಇತರ ಯಾವುದೆ ಸೌಲಭ್ಯಗಳನ್ನು ನೀಡಬಾರದೆಂದು ಕಟ್ಟುನಿಟ್ಟಾಗಿ ಸೂಚಿಸಿತು. ಹಾಗೂ ಈ ನಿರ್ದೇಶನವನ್ನು ಜಾರಿಗೊಳಿಸಲು ಸೂಚಿಸಿ, ಒಂದು ವೇಳೆ ಪ್ರವೇಶ ನೀಡಿದ್ದೇ ಆದಲ್ಲಿ, ಸಂಬಂಧಿಸಿದ ವಾರ್ಡನ್‌ಗಳನ್ನು ಜವಾಬ್ದಾರರಾಗುತ್ತಾರೆಂದು ಸಿಂಡಿಕೇಟ್ ನಿರ್ಣಯಿಸಿತು.

*Proceedings of the 168th meeting of the Syndicate held on 12.06.2023*

**ವಿಷಯ ಸಂಖ್ಯೆ 49**: ದಿನಾಂಕ 07.06.2023 ರಂದು ನಡೆದ ಕೇಂದ್ರ ಖರೀದಿ ಸಮಿತಿ ಸಭೆಯ ನಡಾವಳಿ ಅನಮೋದನೆ ಕುರಿತು.

**ನಿರ್ಣಯ:**

ಚರ್ಚೆಯ ನಂತರ, ದಿನಾಂಕ 07.06.2023 ರಂದು ನಡೆದ ಕೇಂದ್ರ ಖರೀದಿ ಸಮಿತಿ ಸಭೆಯ ನಡಾವಳಿ ಸಿಂಡಿಕೇಟ್ ಪರಿಗಣಿಸಿ ಅನುಮೋದಿಸಿತು.

ಮುಂದುವರೆದು, ಕುಲಪತಿಗಳು ಉತ್ತರ ಪತ್ರಿಕೆ ಹಾಗೂ ಖಾಲಿ ಅಂಕಪಟ್ಟಿ/ಪ್ರಮಾಣಪತ್ರ ಖರೀದಿಯ ಬಗ್ಗೆ ಸರ್ಕಾರದ ನಿರ್ದೇಶನ ಬಂದರೆ ಅದನ್ನು ಸದಸ್ಯರ ಗಮನಕ್ಕೆ ತರಲಾಗುವುದು ಎಂದು ತಿಳಿಸಿದರು.

12/6/23

*Proceedings of the 168th meeting of the Syndicate held on 12.06.2023*

**ವಿಷಯ ಸಂಖ್ಯೆ 50:** ವಿದ್ಯಾರ್ಥಿ ನಿಲಯಗಳ ಸುಧಾರಣಾ ಸಮಿತಿ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ದಿನಾಂಕ: 06–03–2023ರಂದು ಜರುಗಿದ ವಿದ್ಯಾರ್ಥಿ ನಿಲಯಗಳ ಸುಧಾರಣಾ ಸಮಿತಿ ಸಭೆಯ ನಡಾವಳಿಯನ್ನು ಸಿಂಡಿಕೇಟ್ ಪರಿಗಣಿಸಿ ಅನುಮೋದಿಸಿತು.

*Proceedings of the 168th meeting of the Syndicate held on 12.06.2023*

**Item No. 51: Enhancement of intake of MCA programme at Bangalore University-reg.**

***Resolution:***

The Syndicate resolved to enhance the intake of MCA programme from 36 to 60 from the academic year 2023-24.

*Proceedings of the 168th meeting of the Syndicate held on 12.06.2023*

**ವಿಷಯ ಸಂಖ್ಯೆ 52:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 66ರನ್ವಯ ಪರಿಣಿತಿ/ವಿಶಿಷ್ಟ ಅಧ್ಯಯನಗಳನ್ನು ಹಾಗೂ ಅತ್ಯಂತ ವಿಶೇಷ ಮತ್ತು ಅನನ್ಯ ವ್ಯಾಸಂಗಕ್ರಮಗಳನ್ನು ನಡೆಸುವ ಸಂಸ್ಥೆ ಎಂದು ಮನ್ನಣೆ ನೀಡುವ ಬಗ್ಗೆ ಶುಲ್ಕಗಳನ್ನು ಪರಿಷ್ಕರಿಸಿ ನಿಗಧಿಪಡಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಪರಾಮರ್ಶಿತ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, 2023–24ನೇ ಸಾಲಿನಿಂದ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 66ರನ್ವಯ ಪರಿಣಿತಿ/ವಿಶಿಷ್ಟ ಅಧ್ಯಯನಗಳನ್ನು ಹಾಗೂ ಅತ್ಯಂತ ವಿಶೇಷ ಮತ್ತು ಅನನ್ಯ ವ್ಯಾಸಂಗಕ್ರಮಗಳನ್ನು ನಡೆಸುವ ಸಂಸ್ಥೆ ಎಂದು ಮನ್ನಣೆ ನೀಡುವ ಬಗ್ಗೆ ಹಾಗೂ ಪ್ರವೇಶಾತಿ/ಬೋಧನಾ ಶುಲ್ಕಗಳನ್ನು ಶೇ10ರಷ್ಟು ಹೆಚ್ಚಿಸಲು ಸಿಂಡಿಕೇಟ್ ಅನುಮೋದಿಸಿತು.

**ವಿಷಯ ಸಂಖ್ಯೆ 53:** ಡಾ. ಶ್ರೀನಾಥ್ ಬಿ.ಎಸ್, ಸಹಾಯಕ ಪ್ರಾಧ್ಯಾಪಕರು, ಸೂಕ್ಷ್ಮಾಣು ಜೀವ ವಿಜ್ಞಾನ ವಿಭಾಗ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು, ಇವರನ್ನು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ವರ್ಗಾವಣೆ ಮಾಡುವ ಕುರಿತು.

**ನಿರ್ಣಯ:**

ಸೂಕ್ಷ್ಮಾಣು ಜೀವಶಾಸ್ತ್ರ ಮತ್ತು ಜೀವತಂತ್ರಜ್ಞಾನ ವಿಭಾಗದಲ್ಲಿ ನೇಮಕಗೊಂಡಿದ್ದ, ಸಹಾಯಕ ಪ್ರಾಧ್ಯಾಪಕರುಗಳ ಪೈಕಿ ಡಾ. ಕೆ.ಎಸ್. ದೇವರಾಜು ಅವರು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಮರುನೇಮಕಗೊಂಡಿರುವುದರಿಂದ ಹಾಗೂ ಡಾ. ಎಂ.ಕೆ. ಸತೀಶ್ ಅವರು ನಿಧನ ಹೊಂದಿರುವುದರಿಂದ, ಸದರಿ ಹುದ್ದೆಗಳು ಖಾಲಿ ಇದ್ದು ಹಾಗೂ ವಿದ್ಯಾರ್ಥಿ ಮತ್ತು ಶಿಕ್ಷಕರ ಅನುಪಾತವನ್ನು ಕಾಪಾಡಿಕೊಳ್ಳಲು ಡಾ. ಶ್ರೀನಾಥ್ ಬಿ.ಎಸ್, ಸಹಾಯಕ ಪ್ರಾಧ್ಯಾಪಕರು, ಸೂಕ್ಷ್ಮಾಣು ಜೀವ ವಿಜ್ಞಾನ ವಿಭಾಗ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು, ಇವರನ್ನು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ವರ್ಗಾವಣೆ/ಪುನರ್ ನಿಯೋಜಿಸಲು ಮಾಡಲು ಸರ್ಕಾರದ ಪತ್ರ ಸಂಖ್ಯೆ ಇಡಿ 34 ಯುಬಿವಿ 2023 ದಿನಾಂಕ; 03–03–2023ಕ್ಕೆ ನಿರಾಕ್ಷೇಪಣೆ ಪತ್ರವನ್ನು ನೀಡಲು ಸಿಂಡಿಕೇಟ್ ಅನುಮೋದಿಸಿತು.

## GENERAL DISCUSSION:-

1. ವಿತ್ತಾಧಿಕಾರಿಯವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರಿಗೆ ಕಳೆದ 2 ತಿಂಗಳುಗಳಿಂದ ವೇತನ ನೀಡಿರುವುದಿಲ್ಲ. ಕಾರಣ ಅವರ ಸೇವೆಯನ್ನು ಮುಂದುವರೆಸಿರುವುದಿಲ್ಲ. ಅವರ ವೇತನ ಬಿಡುಗಡೆಗೆ ಸಿಂಡಿಕೇಟ್ ಅನುಮೋದನೆ ಬೇಕಾಗಿದೆ ಎಂದು ತಿಳಿಸಿದರು.

   ಚರ್ಚೆಯ ನಂತರ, ವಿಶ್ವವಿದ್ಯಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರಿಗೆ ದಿನಾಂಕ:18–04–2023ರಿಂದ 30–06–2023ರ ವರೆಗಿನ ವೇತನವನ್ನು ಬಿಡುಗಡೆ ಮಾಡಲು ಅನುಮೋದಿಸಿತು. ಕೂಡಲೇ ವಿಶ್ವವಿದ್ಯಾಲಯದ ಸುತ್ತೋಲೆ ದಿನಾಂಕ: 12.05.2023ರ ಪ್ರಕಾರ ಗಣಕಯಂತ್ರ ಬಗೆಗಿನ ಜ್ಞಾನ ಮತ್ತು ತಿಳುವಳಿಕೆ ಕುರಿತು ಆದಷ್ಟು ಬೇಗ ಕ್ರಮವಹಿಸಿ ಮುಂದಿನ ಕ್ರಮ ಕೈಗೊಳ್ಳಬೇಕೆಂದು ಸೂಚಿಸಿತು.

2. ಶ್ರೀ ಉದಯಕುಮಾರ ಎಂ ಅವರು ಮಾತನಾಡಿ, ವಿದ್ಯಾವಿಷಯಕ ಪರಿಷತ್ತಿನಲ್ಲಿ ಈ ಹಿಂದೆ 2004ರಿಂದ ಇಲ್ಲಿಯವರೆಗೂ ಪರೀಕ್ಷೆಯಲ್ಲಿ ಹಾಜರಾಗಿ ಕೆಲವು ವಿಷಯಗಳಲ್ಲಿ ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ

ಒಂದು ಬಾರಿಯ ಅವಕಾಶವೆಂಬಂತೆ ಪರೀಕ್ಷೆ ಬರೆಯಲು ಅವಕಾಶ ನೀಡಲಾಗಿರುತ್ತದೆ. ಆದರೆ, ಇನ್ನೂ ಕೆಲವು ವಿದ್ಯಾರ್ಥಿಗಳು ಅವರ ಕೋರ್ಸಿನ ಅವಧಿಯು ಮುಗಿದರೂ ಕೂಡ ಒಂದೆರಡು ಪತ್ರಿಕೆಗಳಲ್ಲಿ ನಪಾಸಾಗಿದ್ದು, ಪದವಿ ಪೂರೈಸಲು ಅವಕಾಶ ವಂಚಿತರಾಗಿದ್ದಾರೆ. ಆದ್ದರಿಂದ ಒಂದು ಬಾರಿಯ ಅವಕಾಶದಂತೆ ಅಂತಹ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅನುಮತಿ ನೀಡಲು ವಿದ್ಯಾವಿಷಯಕ ಪರಿಷತ್ತಿಗೆ ಶಿಫಾರಸ್ಸು ಮಾಡಲು ಕೋರಿದರು.

ಚರ್ಚೆಯ ನಂತರ, 2004ರಿಂದ ಸೆಮಿಸ್ಟರ್ ಪದ್ಧತಿಯಲ್ಲಿ ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ಮತ್ತೊಂದು ಒಂದು ಬಾರಿಯ ಅವಕಾಶ ನೀಡುವ ಬಗ್ಗೆ ವಿದ್ಯಾವಿಷಯಕ ಪರಿಷತ್ತಿಗೆ ವಿಷಯವನ್ನು ಮಂಡಿಸಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು.

3. ಡಾ. ಕೆ.ಎ. ಮಹೇಶ್ವರಯ್ಯ ಅವರು ಮಾತನಾಡಿ, ಮೌಲ್ಯಮಾಪನ ಕಾರ್ಯದಲ್ಲಿ ಮಾಡರೇಟರ್ ಅವರಿಗೆ ನೀಡುತ್ತಿರುವ ಸಂಭಾವನೆಯ ದರವನ್ನೇ ಪರೀಕ್ಷಾ ಮಂಡಳಿಗಳ ಅಧ್ಯಕ್ಷರುಗಳಿಗೆ ನಿಗದಿಪಡಿಸಿ, ಆ ದರವನ್ನೇ ಮಂಜೂರು ಮಾಡಬೇಕೆಂದು ಕೋರಿದರು.

ಕುಲಪತಿಯವರು ಮಾತನಾಡಿ, ಈ ಬಗ್ಗೆ ವಿತ್ತಾಧಿಕಾರಿಗಳು ಹಾಗೂ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ ನಿರ್ಣಯ ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು.

ಚರ್ಚೆಯ ನಂತರ, ಈ ಕುರಿತು ಸೂಕ್ತ ನಿರ್ಣಯ ತೆಗೆದುಕೊಂಡು ಆದೇಶ ಹೊರಡಿಸಲು ಸಿಂಡಿಕೇಟ್ ಕುಲಪತಿಯವರಿಗೆ ಅಧಿಕರಿಸಿತು.

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಕುಲಸಚಿವರು ಕುಲಪತಿಯವರು